## Leave of Absence.

Mr. SPEAKER.—I have received from the Hon'ble Member Sri A. C. Bandi Gowda, a Member of this Assembly, a request for leave of absence from attending the current sittings of the Assembly due to his illness. Is it the pleasure of the House that permission be granted to the Member from attending the current sittings of the Assembly?

HON'BLE MEMBERS.—Yes.

Mr. SPEAKER.—Permission to remain absent from the current sittings of the Assembly, is granted to Sri A. C. Bandi Gowda.

---

## MYSORE PANCHAYAT RAJ BILL, 1964

### (As reported by the Joint Select Committee)

*(Motion to consider)*

Sri RAMAKRISHNA HEGDE (Minister for Development, Panchayat Raj and Co-operation) I beg.....

Sri S. M. KRISHNA (Maddur).—There has been some confusion about the business before the House. I understood that this Panchayat Raj Bill would be taken up after the budget debate.

Mr. SPEAKER.—I do not know who gave that assurance and whom the Hon'ble Member contacted. He did not contact me and I did not give any assurance. The Business Advisory Committee dealt with it. I think I mentioned to the House yesterday as to how this Bill and the other resolution regarding Survey Settlement could be discussed.

Sri S. SIVAPPA.—After discussion in the Business Advisory Committee the time allotted for this was 14 hours. Subsequently in the meeting of the Whips it was suggested by the Whip of the Congress Party and the member representing the Treasury Benches that this Bill may be postponed and instead non-official business may be taken up today and that was agreed to. I was also present in that meeting. Then you suggested that it was the responsibility of the Treasury Benches to see that the concerned Ministers are also informed about this. Accordingly, the resolution of Sri V. S. Patil was to come up today. But all of a sudden I see in the Agenda for today that the Panchayat Raj Bill has been put for discussion. It is really surprising as to how this change took place.

Mr. SPEAKER.—Sri Sivappa, is evidently not experienced with regard to certain matters. Negotiations are negotiations and not conclusions. Revised conclusions may displace old conclusions, but attempted negotiations to replace old conclusions do not displace old conclusions.

ಶ್ರೀ ಎಚ್. ಆರ್. ಕೇಶವ ಮೂರ್ತಿ (ಗಂಡಸಿ).—ಸ್ವಾಮಿ, ಈ ಪಂಚಾಯಿತಿ ರಾಜ್ಯದ ವಿಧೇಯಕಕ್ಕೆ ಸಂಬಂಧಪಟ್ಟ ಹಾಗೆ ಶ್ರೀಮಾನ್ ಕೊಂಡಜ್ಜಿ ಬಸಪ್ಪನವರು ಒಂದು ವರದಿಯನ್ನು ಕೊಟ್ಟಿದ್ದರು. ಅದನ್ನು ಸರ್ಕಾರದವರು ತೇಲಸಿದರೋ ಅಥವಾ ಮುಳುಗಿಸಿದರೋ ಎಂಬುದನ್ನು ಹೇಳಬೇಕು.

(ಉತ್ತರವಿಲ್ಲ.)

Sri RAMAKRISHNA HEGDE.—I beg to move :

" That the Mysore Panchayat Raj Bill, 1964, as reported by the Joint Select Committee, be taken into consideration."

Mr. SPEAKER.—Motion moved :

" That the Mysore Panchayat Raj Bill, 1964, as reported by the Joint Select Committee, be taken into consideration."

Sri RAMAKRISHNA HEGDE.—Mr. Speaker, Sir, Hon'ble Members would recall that in the last session the Panchayat Raj Bill was introduced in this House and after some discussion it was decided that the Bill may be referred to a Joint Select Committee.

ಶ್ರೀ ಎಸ್. ಗೋಪಾಲಗೌಡ. (ತೀರ್ಥಹಳ್ಳಿ).—ಸ್ವಾಮಿ, ಮಾನ್ಯ ನಚಿವರು ಕನ್ನಡದಲ್ಲಿ ಮಾತ ನಾಡಿದರೆ ಒಳ್ಳೆಯದು ಮತ್ತು ಕ್ಷೇಮ ಅನಿಸುತ್ತದೆ.

Sri G. V. GOWDA (Palya).—Some of us had given dissenting minutes, but they have been wrongly printed.

Mr. SPEAKER.—The Hon'ble Member should have pointed it out at the appropriate time, either before or after the Minister's speech but not when the Minister is speaking.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರ ಅಪ್ಪಣೆ ಆದರೆ ನಾನು ಕನ್ನಡದಲ್ಲಯೇ ಮಾತ ನಾಡುತ್ತೇನೆ.

Mr. SPEAKER.—The Hon'ble Minister should have seen this before. When once he was begun in English he must continue in English. There must be some sanctity to the rules. It is not for nothing that rules have been framed.

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ, ಇದು ಬಹಳ ಮುಖ್ಯವಾದ ಮಸೂದೆ. ಆದ್ದರಿಂದ ಇದನ್ನು ಕನ್ನಡದಲ್ಲಿ ಹೇಳದರೆ ಒಳ್ಳೆಯದು.

Mr. SPEAKER.—I am to decide which is important and which is not. I am not permitting the Minister to address in Kannada on this occasion.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ತಾವು ಈ ತರಹ ನಿಲುವು ತೆಗೆದುಕೊಳ್ಳುವುದು ಈ ನಭೆಗೂ ಮತ್ತು ತಮಗೂ ಬಹಳ ಅಪಾಯ.

Mr. SPEAKER.—Then I will face the danger. The Hon'ble Member will kindly resume his seat.

ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ನಚಿವರು ಇನ್ನೂ ಭಾಷಣವನ್ನು ಶುರುಮಾಡಿಲ್ಲ. ಆದ್ದರಿಂದ ಅವರು ಕನ್ನಡದಲ್ಲಿ ಭಾಷಣ ಮಾಡುವುದು ಒಳ್ಳೆಯದು.

Mr. SPEAKER.—I am not giving permission. I have said that and I am repeating. I am asking the Hon'ble Member to resume his seat.

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ, ಮಾನ್ಯ ನಚಿವರು ಈ ಮಸೂದೆಯ ಮೇಲೆ ಇನ್ನೂ ಭಾಷಣವನ್ನು ಪ್ರಾರಂಭಮಾಡಿಲ್ಲ. ಹೀಗಿರುವಾಗ ಅವರು ಕನ್ನಡದಲ್ಲಿ ಭಾಷಣ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರು ಅವರಿಗೆ ಅಪ್ಪಣೆಯನ್ನು ಕೊಡಿನಬೇಕು ಎಂದು ನನ್ನ ಪ್ರಾರ್ಥನೆ.

Mr. SPEAKER.—Then my permission is not wanted.

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ, ಮಾನ್ಯ ಸಚಿವರು ಕನ್ನಡದಲ್ಲಿ ಭಾಷಣವನ್ನು ಮಾಡುವುದಕ್ಕೆ ಬೇಕಾದರೆ ಈ ಮಾನ್ಯ ಸಭೆಯ ಒಪ್ಪಿಗೆಯನ್ನು ಪಡೆದು ತಾವು ಅವರಿಗೆ ಅಪ್ಪಣೆಯನ್ನು ಕೊಡಿ.

Mr. SPEAKER.—If permission is wanted I have not given it. (***) Is it the desire of the House that the Minister should speak in Kannada ? If that is so, I will permit him.

SOME HON'BLE MEMBERS.—Yes.

Mr. SPEAKER.—Then he may speak in Kannada We must have clearcut ideas. Once we begin a speech in a certain language we must adhere to it. If the Hon'ble Member Sri S. Gopala Gowda were to tell me that there is danger, I am not running away from any danger. I have to make it clear.

Sri RAMAKRISHNA HEGDE.—May I explain ? Sir, Because I have made the motion in English, in the same strain I continued. I may assure my friend Sri S. Gopala Gowda that I would at any time prefer Kannada to English, but as I have already started in English, I hope members would not mind my continuing in English.

ಶ್ರೀ ಎಸ್. ಗೋಪಾಲ ಗೌಡ.—ಕನ್ನಡವನ್ನು ಅಡಳಿತಭಾಷೆಯಾಗಿ ಮಾಪುವುದಕ್ಕೆ ಈ ಮಾನ್ಯ ಸಭೆ ಒಪ್ಪಿಕೊಂಡಿದೆ. ಈ ಮಾನ್ಯ ಸಭೆಯಲ್ಲಿ ಕನ್ನಡ ಬಾರದೆ ಇರತಕ್ಕವರು ಕೆಲವು ಮಾನ್ಯ ನದಸ್ಯರಿದ್ದಾರೆ. ಅವರು ಹೊರತು ಕನ್ನಡ ಬರತಕ್ಕವರು ಯಾರಾದರೂ ಭಾಷಣಗಳನ್ನು ಮತ್ತು ಹೇಳಿಕೆಗಳನ್ನು ಇಂಗ್ಲೀಷಿನಲ್ಲಿ ಮಾಡುವುದಾದರೆ ಅದನ್ನು ನಾನು ಬಹಳ ತೀವ್ರವಾಗಿ ಪ್ರತಿಭಟಿಸುತ್ತೇನೆ.

(The bell was rung by the Speaker).

Mr. SPEAKER.—I am ringing the bell. I cannot have two members on their legs simultaneously.

ಶ್ರೀ ಎಸ್. ಗೋಪಾಲ ಗೌಡ.—ಅದು ಬೇರೆ ಪ್ರಶ್ನೆ ಆಯಿತು, ಸ್ವಾಮಿ.

Mr. SPEAKER.—Therefore, the Hon'ble Member will resume his seat.

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ, ಮಾನ್ಯ ಮಂತ್ರಿಗಳು ದಯವಿಟ್ಟು ಕನ್ನಡದಲ್ಲಿ ಮಾ ನಾಡಬೇಕು.

Mr. SPEAKER.—If the Minister yields, it is allright. But rules must be observed. The rules are there to be observed. Otherwise why have we framed the rules ?

ಶ್ರೀ ಎಸ್. ಗೋಪಾಲ ಗೌಡ.—ರೂಲ್ಸ್ ಇರುವುದು ನಮ್ಮ ಅನುಕೂಲಕ್ಕಾಗಿ ತಾನೆ ?

Mr. SPEAKER.—That is exactly what I am saying. The rules are there for being observed not at the whim and fancy of any member. The rules are there to be observed by eveybody. And yet when the Minister is addressing, the Hon'ble Member, Sri S. Gopal Gowda gets up and disturbs continuously.

ಶ್ರೀ ಎಸ್. ಗೋಪಾಲ ಗೌಡ.—ತಾವು ಹೇಳುವುದನ್ನು ನಾನು ಒಪ್ಪುತ್ತೇನೆ. ಮಾನ್ಯ ಸಚಿವರು ಕನ್ನಡದಲ್ಲಿ ಮಾತನಾಡಬೇಕೆಂದು ನಾನು ಮೊದಲೇ ಹೇಳಬೇಕಾಗಿತ್ತು.

Mr. SPEAKER.—I am not permitting unless the Minister yields.

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ, ನಾನೊಂದು ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ.

Mr. SPEAKER.—If the Minister does not yield, Sri S. Gopala Gowda knows the rule. Let him wait for his chance.

ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.....ಒಂದೆರಡು ಮಾತನ್ನು ಹೇಳಬೇಕಾಗಿದೆ; ತಾವು ಅಪ್ಪಣೆ ಕೊಟ್ಟರೆ ಹೇಳುತ್ತೇನೆ.

Mr. SPEAKER.—If the Hon'ble Minister yields, I have no objection. If he does not, I cannot compel him.

ಶ್ರೀ ಎಸ್. ಗೋಪಾಲ ಗೌಡ.—ನಾನು ಹೇಳುವುದನ್ನು ಹೇಳಲೇಬೇಕು.

Mr. SPEAKER.—I will not permit it.

ಶ್ರೀ ಎಸ್. ಗೋಪಾಲಗೌಡ.—ಹೇಳಿಯೇ ಹೇಳುತ್ತೇನೆ.

Mr. SPEAKER.—I am not permitting it.

ಶ್ರೀ ಎಸ್. ಗೋಪಾಲ ಗೌಡ.—ಈ ವಿಷಯದಲ್ಲಿ ತಾವು ಅವಕಾಶ ಕೊಡದಿದ್ದರೆ, ನಾನು ಹೇಳಲೇಬೇಕು.

Mr. SPEAKER.—All the members may kindly resume their seats. If the Hon'ble Member is threatening me, and if he is going to do anything contrary to the rules, I will prevent him. If the Hon'ble Member thinks that before the Minister has yielded and has taken his seat, he is going to talk, I am not going to permit it. It will be contempt of the House. I will take action.

ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರಿಬಿದನೂರು).—ತಾವು ಈ ಸಭೆಯ ಅಭಿಪ್ರಾಯವನ್ನು ಕೇಳಿದಿರಿ, ಸಭೆಯವರು ಕನ್ನಡದಲ್ಲಿ ಮಾತನಾಡುವುದಕ್ಕೆ ಒಪ್ಪಿದ್ದಾರೆ, ಆದ್ದರಿಂದ ತಾವು ಮಾನ್ಯ ಸಚಿವರು ಕನ್ನಡದಲ್ಲಿ ಮಾತನಾಡುವುದಕ್ಕೆ ಒಪ್ಪಿಗೆ ಕೊಡಬೇಕು, ಅಷ್ಟೆ.

Mr. SPEAKER.—What is the point now? I was dealing with the question raised by Sri S. Gopala Gowda. He says that he is going to do what he likes irrespective of the rules.

ಶ್ರೀ ಎಸ್. ಗೋಪಾಲ ಗೌಡ.—ತಮಗಾಗಲಿ, ಸಭೆಗಾಗಲಿ ಅವಮಾನ ಮಾಡಬೇಕು ಅಥವ ಕಾನೂನುಗಳನ್ನು ಮುರಿಯಬೇಕು ಅನ್ನುವುದು ಉದ್ದೇಶವಲ್ಲ. ಅದಕ್ಕೆ ಪ್ರಯತ್ನ ಮಾಡುತ್ತಾ ಇಲ್ಲ. ನಾನು ತಪ್ಪು, ನಣ್ಣ ತಪ್ಪು ಮಾಡಿರಬಹುದು. ಅವರು ಪ್ರಾರಂಭ ಮಾಡುವುದಕ್ಕೆ ಮೊದಲು ಕನ್ನಡದಲ್ಲಿ ಮಾತನಾಡಿ ಎಂದು ನಾನು ಹೇಳಬೇಕಾಗಿತ್ತು ಬಹುಶಃ. ಆದರೆ ಅದು ನನ್ನ ಕರ್ತವ್ಯ ವಲ್ಲ. ಪ್ರತಿ ಸಲವೂ ಕನ್ನಡದಲ್ಲಿ ಮಾತನಾಡಿ ಎಂದು ಹೇಳುವುದಕ್ಕೆ ಅವರಿಗೆ ಗೊತ್ತಿಲ್ಲವೆ? ಅವರು ಈ ಸಭೆಗೆ ಸಲ್ಲಬೇಕಾದ ಕರ್ತವ್ಯವನ್ನು ಮಂತ್ರಿಗಳಾಗಿ ಮುರಿಯುವುದಾದರೆ ಏನು ಹೇಳಬೇಕು? ಅವರು ಇಂಗ್ಲೀಷಿನಲ್ಲಿ ಷುರು ಮಾಡಿದಾಗ, ಏನೋ ಓದುತ್ತಿದ್ದಾರೆ ಅಂತ ತಿಳಿದುಕೊಂಡಿದ್ದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಅನೇಕ ಸಲ ಇಂಗ್ಲೀಷ್‌ನಲ್ಲಿ ಹೇಳಿದ್ದಾರೆ.

ಶ್ರೀ ಎಸ್. ಗೋಪಾಲ ಗೌಡ.—ಈ ವಿಷಯವನ್ನು ನಾನು ಪ್ರಾರಂಭದಲ್ಲಿಯೇ ಹೇಳಬೇಕಾಗಿತ್ತು. ಆದರೆ ಅವರು ಏನೋ ಒಂದು ಕಾಗದವನ್ನು ಓದುತ್ತಿದ್ದಾರೆಂದು ತಿಳಿದುಕೊಂಡಿದ್ದೆ. ನಾನು ತಮ್ಮ ಮೂಲಕ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಒಂದು ನಣ್ಣ ನಿಯಮ ವಿದೆ. ಯಾವನಾದರೂ ಒಬ್ಬ ಸದಸ್ಯ ಒಂದು ಭಾಷಣವನ್ನು ಒಂದು ಭಾಷೆಯಲ್ಲಿ ಪ್ರಾರಂಭ ಮಾಡಿದ ನಂತರ, ಬೇರೆ ಭಾಷೆಗೆ ಭಾಷಣವನ್ನು ಬದಲಾಯಿಸಕೂಡದು ಎಂದು ಏನು ಒಂದು ನಿಯಮವಿದೆಯೋ ಅದನ್ನು ಬಹಳ ಸಲ ಮುರಿದಿದ್ದೇವೆ. ಈ ಸಭೆಯಲ್ಲಿ ಮಾನ್ಯ ಕೃಷ್ಣಪ್ಪನವರು, ಒಂದು ಸಲವಲ್ಲ, ಪ್ರತಿಸಲವೂ ಕನ್ನಡ ಮತ್ತು ಇಂಗ್ಲೀಷಿನಲ್ಲಿ ತಮ್ಮ ಭಾಷಣಗಳನ್ನು ಮಾಡಿದ್ದಾರೆ, ಅದು ರಿಕಾರ್ಡಿನಲ್ಲಿದೆ. ಅದಕ್ಕೆ ತಾವು ಪರ್ಮಿಶನ್ ಕೊಟ್ಟಿದ್ದಿರೊ, ಕೊಟ್ಟಿರಲಲ್ಲವೊ, ಅದು ಬೇರೆ ಪ್ರಶ್ನೆ. ಆದ್ದರಿಂದ ಆ ಒಂದು ನಣ್ಣ ನಿಯಮವನ್ನು ಎತ್ತಿಹಿಡಿಯುವುದಕ್ಕಾಗಿ, ಮಾನ್ಯ ಸದಸ್ಯರ ಅಭಿಪ್ರಾಯಕ್ಕೆ ವಿರುದ್ಧವಾಗಿ ತಾವು ಅಪ್ಪಣೆ ಕೊಡಿಸಿದರೆ, ಕನ್ನಡದಲ್ಲಿ ಭಾಷಣ ಮಾಡುವುದಕ್ಕಾಗುವುದಿಲ್ಲವೆಂದು ಹೇಳುವುದಾದರೆ, ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಅದು ಸರಿಯೆ ಎಂದು ಕೇಳುತ್ತೇನೆ? ಮಾನ್ಯ ಸಚಿವರು ಗ್ರಾಮರಾಜ್ಯಕ್ಕೆ ಸಂಬಂಧಿಸಿದ ಮಸೂದೆಯ ಮೇಲೆ ಮಾತನಾಡುತ್ತಿದ್ದಾರೆ. ಮಾನ್ಯ ಸಭೆಯಲ್ಲಿ ಎಷ್ಟೋ ಜನ ಇಂಗ್ಲೀಷು ಬರದಿರತಕ್ಕಂಥ ಸದಸ್ಯರಿದ್ದಾರೆ, ಅವರೂ ಸಚಿವರ ಭಾಷಣವನ್ನು ಅರ್ಥ ಮಾಡಿಕೊಳ್ಳಬೇಕು. ಮೇಲಾಗಿ ಇದು ಪಂಚಾಯಿತಿ ರಾಜ್ಯ ಮಸೂದೆ, ಜನತೆ ಅವರ ಭಾಷಣವನ್ನು ಅರ್ಥಮಾಡಿಕೊಳ್ಳಬೇಕು. ಮೂರನೆಯ ದಾಗಿ, 1965ನೇ ಇಸವಿ ಜನವರಿ 26ನೇ ತಾರೀಖು ನಂತರ ಕನ್ನಡವನ್ನು ಅಧಿಕೃತ ಭಾಷೆಯಾಗಿ ಒಪ್ಪಿಕೊಂಡಿದ್ದಾರೆ. ಹೀಗಿರುವಾಗ ಮಾನ್ಯ ಸಭೆಯ ಕಾರ್ಯಕಲಾಪಗಳಿಗಾಗಿ ಕನ್ನಡವನ್ನು ಕಡೆಗಾಣಿಸಿ, ಮಾನ್ಯ ಸಚಿವರು ಇಂಗ್ಲೀಷಿನಲ್ಲಿ ಭಾಷಣ ಮಾಡುವುದಕ್ಕೆ ಪ್ರಾರಂಭ ಮಾಡುವುದು,

ತಾವು ಅದೇ ಭಾಷೆಯನ್ನು ಮುಂದುವರಿಸಿ, ಕನ್ನಡಕ್ಕೆ ಬದಲಾವಣೆ ಮಾಡಿ ಮಾತನಾಡುವುದು ಬೇಡ ಅನ್ನುವುದು ಉಚಿತವಲ್ಲ. ಅಲ್ಲದೆ ನಾನು ಈ ಸಭೆಯನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಈ ನಿಯಮವನ್ನು ತಾವು ಏನು ಹೇಳಿದ್ದೀರಿ, ಅದನ್ನು ಪುನರ್ಮಮರ್ಶೆ ಮಾಡುವುದಕ್ಕೆ ಈ ಸಭೆ ಆಲೋಚನೆ ಮಾಡಬೇಕು, ಮತ್ತು ಕನ್ನಡದಲ್ಲಿ ಮಾನ್ಯ ಸಚಿವರು ಭಾಷಣ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

Mr. SPEAKER.—The Hon'ble Member has often, time and again, thought that what he thinks should prevail, rule or no rule. He does not care as to what others think of the rules, but his view should prevail. That is an attitude, which I have not been able to understand despite my contacts with him since the beginning of these sessions. Ever since this House began and I occupied this seat, I have found him saying: "I will do this and that, whether it is contrary to the rules or not." When I tell him that I will not permit the Hon'ble Minister to change, Sri Gopala Gowda refers to what Sri M. V. Krishnappa has done. Does that wipe out the rules?

Sri M. V. KRISHNAPPA (Minister for Revenue).—I did not know there was such a rule. I am prepared to withdraw and hereafter I will speak in one language.

Mr. SPEAKER.—I am not at the moment concerned with the ignorance of the Hon'ble Minister for Revenue. I am concerned with the rule as it stands. Sri S. Gopala Gowda wants the rule to be modified. With his experience of parliamentary work, he should know that rules are not modified simply by standing up here and saying that they should be modified. There are known procedures for it. He must move an amendment and the House must accept it. Simply because he thinks a rule is bad and says so in the House, the rule does not get itself abrogated. But so long as a rule is in force, I am bound to follow it. In enforcing it, I do nothing wrong. I believe that I have several times asked Sri V. M. D o to stick to one language. It is not the first time, I am enforcing it. If Sri S. Gopal Gowda imagines something or smells something, no one is responsible for it. If he persists to do such things, he may do so. It does not change my position.

The other question is whether the Hon'ble Minister has or has not begun his speech. The Minister himself said that he has begun. That is why permission was wanted. He moved the motion in English. He commenced speaking in English. It may not be a lengthy speech, but he commenced in English. He has not spoken a single word in Kannada today. Therefore this kind of disturbance is understandable and should not be repeated. I would appeal to all the Members. I am trying to give as much co-operation as possible. I object only to the Member saying that he will see that the speech does not proceed or something to that effect. Thereat I draw a line. Should not the Members give that much of co-operation? Otherwise, how am I to carry on the work?

ಶ್ರೀ ಎಸ್. ಗೋಪಾಲ ಗೌಡ.—ನಾನು ಪ್ರತಿಭಟಿಸುತ್ತಿದ್ದೇನೆ.....

Sri RAMAKRISHNA HEGDE.—Sir, I was saying that this Bill was discussed.....

ಶ್ರೀ ಎಸ್. ಗೋಪಾಲ ಗೌಡ.—ನಾನು ಇಂಗ್ಲೀಷಿನಲ್ಲಿ ಭಾಷಣಮಾಡಿ ಮುಂದುವರಿಸುವುದನ್ನು ಪ್ರತಿಭಟಿಸುತ್ತೇನೆ.

Mr. SPEAKER.—Therefore the Hon'ble Member would continue to stand for the rest of the day. Am I to permit it?

ಶ್ರೀ ಎಸ್. ಗೋಪಾಲಗೌಡ.—ಹೌದು, ಹೌದು. ನಾನು ಕನ್ನಡದಲ್ಲಿ ಮಾತನಾಡಿ ಎಂದು ಹೇಳುತ್ತಲೇ ಇರುತ್ತೇನೆ—ಭಾಷಣ ಮುಗಿಯುವ ತನಕ.....

Mr. SPEAKER.—Then the only course open to me is that I cannot permit the Member to stand when the Hon'ble Minister is addressing. If he does not like to sit, then the next course is open to him.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈ ಭಾಷಣ ಗ್ರಾಮಕ್ಕೆ ಮುಟ್ಟತಕ್ಕದ್ದು. ಆದ್ದರಿಂದ ದಯೆಯಿಟ್ಟು ಕನ್ನಡದಲ್ಲೆಯೇ ಭಾಷಣ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. SPEAKER.—If Hon'ble Member violates the rule, making a speech when the Minister is standing, what can I do?

Sri K. LAKKAPPA (Hebbur).—Will the Hon'ble Minister yield for a minute? ಅವರಿಗೆ ಕನ್ನಡದಲ್ಲಿ ಮಾತನಾಡುವುದಕ್ಕೆ ಬರುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಸ್ವಾಮೀ, ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ, ಮಾನ್ಯ ಸಭೆಯ ಅಭಿಪ್ರಾಯವನ್ನು ತೆಗೆದುಕೊಂಡು ಈ ಭಾಷಣವನ್ನು ಕನ್ನಡದಲ್ಲಿಯೇ ಮಾಡುವಂತೆ ಅವಕಾಶ ಕೊಡಬೇಕು ಎಂದು.

ಅಧ್ಯಕ್ಷರು.—ಇಷ್ಟು ಸುಲಭವಾಗಿ ತಾವು ಮಾತನಾಡಿದರೆ ಹೇಗೆ? ಸಭೆಯ ಅಭಿಪ್ರಾಯ ಎಲ್ಲರೂ ಕನ್ನಡದಲ್ಲಿಯೇ ಭಾಷಣ ಮಾಡಬೇಕು ಎಂದು. ಆದರೆ ಕನ್ನಡದಲ್ಲಿಯೇ ಮಾತನಾಡಬೇಕೆಂದು ನಾನು ಒತ್ತಾಯ ಮಾಡುವಹಾಗಿಲ್ಲ. ಹಾಗಾಗುವುದಿಲ್ಲ ಹೀಗೆ ಆಗುವುದಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರೆ ಹೇಗೆ? ಮೊದಲು ಇಂಗ್ಲಿಸ್ ಭಾಷೆಯಲ್ಲಿ ಮಾತನಾಡಿರುವಾಗ ಅವರನ್ನು ಈಗ ಮತ್ತೆ ಕನ್ನಡದಲ್ಲಯೇ ಮಾತನಾಡಬೇಕೆಂದು ಒತ್ತಾಯವಾಗಿ ಹೇಳುವಂತಿಲ್ಲ. ಅದು ಮಾತನಾಡುವವರಿಗೇ ಸೇರಿದ್ದು.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಇಲ್ಲಿರತಕ್ಕ ವಿಷಯ ಬಹಳ ಮುಖ್ಯವಾದುದು. ಈ ಸಭೆಯ ಮುಂದೆ ಪಂಚಾಯತಿ ರಾಜ್ಯಗಳ ಮಸೂದೆ ಬಂದಿರುವುದು ಬಹಳ ಮುಖ್ಯವಾದುದು. ಇದರ ಬಗ್ಗೆ ಸಚಿವರು ಮಾತನಾಡುವಾಗ ಎಲ್ಲ ಜನಕ್ಕೂ ತಿಳಿದರೆಯಾಗದಂತೆ ಮಾತನಾಡುವುದು ಮುಖ್ಯ. ಕನ್ನಡ ಈ ದೇಶದ ಅಧಿಕೃತ ಭಾಷೆಯಾಗಿ ಇಷ್ಟು ಹೊತ್ತಿಗೆ ಮಾಡಿದ್ದಿದ್ದರೆ ಇಂತಹ ಒಂದು ಗೊಂದಲದ ಪರಿಸ್ಥಿತಿ ಇಲ್ಲ ಈಗ ಬರುತ್ತಿರಲಿಲ್ಲ.

ಅಧ್ಯಕ್ಷರು.—ಯಾರು ಗೊಂದಲದ ಪರಿಸ್ಥಿತಿ ತರುತ್ತಿರುವವರು?

ಶ್ರೀ ಎಸ್. ಶಿವಪ್ಪ.—ಕನ್ನಡದಲ್ಲಿ ಮಾತನಾಡತಕ್ಕ, ಭಾಷೆಯ ಪ್ರಶ್ನೆ, ಇಲ್ಲಿ ಉದ್ಭವಿಸಿರುವುದು ಈಗಾಗಲೇ ಮಾನ್ಯ ಸಚಿವರು ಇಂಗ್ಲಿಷಿನಲ್ಲಿ ಅವರ ಭಾಷಣವನ್ನು ಆರಂಭ ಮಾಡಿದುದುರಲ್ಲಿ ತಪ್ಪು ಇದೆ. ಕನ್ನಡದಲ್ಲಯೇ ಇದರ ಬಗ್ಗೆ ಮಾತನಾಡಬೇಕೆಂದು ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ಗೋಪಾಲ ಗೌಡರು ಹೇಳುತ್ತ ಇದನ್ನು ಪ್ರತಿಭಟಿಸುತ್ತಿದ್ದಾರೆ. ಕನ್ನಡದಲ್ಲಿ ಅಥವಾ ಇಂಗ್ಲಿಷಿನಲ್ಲಿ ಮಾತನಾಡತಕ್ಕ ಜವಾಬ್ದಾರಿ ಈಗ ಸರಕಾರದ ಕಡೆ ಇದೆ. ಸರಕಾರದ ವತಿಯಿಂದ ಮಂತ್ರಿಗಳು ಮಾತನಾಡುತ್ತಿರುವುದರಿಂದ ಇಲ್ಲಿನ ನಂದರ್ಭಗಳಿಗನುಸಾರವಾಗಿ ಅವರು ಮಾತನಾಡುವ ಭಾಷಣವನ್ನು ಬದಲಾಯಿಸಿ ಈಗ ಕನ್ನಡದಲ್ಲಯೇ ಇಲ್ಲಿ ಮಾತನಾಡುವುದು ಒಳ್ಳೆಯದು ಎಂದು ನಾನು ಅಭಿಪ್ರಾಯ ಪಡುತ್ತೇನೆ.

†Sri V. S. PATIL (Belgaum-1).—Sir, I would submit that no Member should be compelled to speak in a particular language. It should be left to his choice. Some of us do not know Kannada and if the whole proceedings are in Kannada we would be handicapped. There are Urdu-speaking Members and if they are forced to speak in a particular language, it would become difficult and it would come in the way of real democracy. Let us be allowed to express our views in the language we prefer and let there be no compulsion in this matter. Let us take

†Indicates that the remarks or speeches have not been revised by the member concerned.

note of the language bigotry of which the whole of the South is ablaze. We should not encourage it.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಅಧ್ಯಕ್ಷರಲ್ಲಿ ನನ್ನದೊಂದು ವಿವರಣೆಯನ್ನು ಇಲ್ಲಿ ಕೊಡಬೇಕಾಗಿದೆ. ಮಾನ್ಯ ಸ್ನೇಹಿತರಾದ ಶ್ರೀಮಾನ್ ಪಿ. ಎಸ್. ಪಾಟೀಲ್‌ರವರು ನಾನು ತಮ್ಮಲ್ಲಿಟ್ಟ ಬೇಡಿಕೆ ಬಗ್ಗೆ ಇಲ್ಲಿ ಮಾತನಾಡುತ್ತ ನನ್ನ ಭಾಷಣವನ್ನು 'ಬಗಟರಿ' ಎಂದು ಕರೆಯುತ್ತ ಕೆಲವು ವಿಚಾರಗಳನ್ನು ಇಲ್ಲಿ ತಿಳಿಸಿದರು.

Mr. SPEAKER.—Both the member may decide it between themseleves.

† ಶ್ರೀ ಎಸ್. ಗೋಪಾಲಗೌಡ.—ಇಲ್ಲಿರುವ ಎಲ್ಲ ಸದಸ್ಯರನ್ನೂ ಕನ್ನಡದಲ್ಲಯೇ ಭಾಷಣ ಮಾಡಬೇಕು, ಬೇರೆ ಯಾವ ಭಾಷೆಯಲ್ಲೂ ಮಾತನಾಡಬಾರದು ಎಂದು ಹೇಳುವಂತಹ ಅಭಿಪ್ರಾಯ ನನ್ನದಲ್ಲ. ಆ ರೀತಿಯಾದ ಆರೋಪಣೆಯನ್ನು ನನ್ನ ಮೇಲೆ ಹೊರಿಸುವುದೂ ಸಿಜವಲ್ಲ. ತಮಗೆ ನಾನು ತಿಳಿಸುವುದು ಇಲ್ಲಿ ಯಾವ ಹೆಸರನ್ನೂ ಹೇಳಬೇಡ ಎಂದಿದ್ದರೂ ಕೂಡ ನಾನು ಮಾನ್ಯ ಸದಸ್ಯರಾದ ಡಿಮೆಲೋ ರವರು ಇಂಗ್ಲಿಷಿನಲ್ಲಿ ಮಾತನಾಡುವಾಗ ಅವರನ್ನು ಮಾತನಾಡಕೂಡದು ಎಂದು ಹೇಳಲಲ್ಲ. ಅಲ್ಲದೆ ಇನ್ನೂ ಅನೇಕರ ಹೆಸರುಗಳನ್ನೂ ಇಲ್ಲಿ ಹೇಳಬಹುದು. ಮಾನ್ಯ ಸದಸ್ಯರುಗಳಾದ ಶ್ರೀ ಮಾನ್ ಪಿ. ಎಸ್. ಪಾಟೀಲ್‌ರವರು, ಸುನ್ತಂಕರ್ ರವರು ಇಂಗ್ಲಿಷಿನಲ್ಲಿ ಭಾಷಣಮಾಡಿದಾಗ ಹಾಗೂ ಮಾನ್ಯ ಬಿಜ್ಜಿಯವರು ಮರಾಠಿಯಲ್ಲಿ ಭಾಷಣ ಮಾಡಿದಾಗ ನಾನು ಅವರುಗಳನ್ನು ವಿರೋಧಿಸಲಲ್ಲ. ಯಾವ ಭಾಷೆಯಲ್ಲಿ ಬೇಕಾದರೂ ಅವರು ಹೇಳಬಹುದು. ಆದರೆ ಇಂತಹ ಒಂದು ವಿಷಯದ ಮೇಲೆ ಶ್ರೀ ಮಾನ್ ಪಿ. ಎಸ್. ಪಾಟೀಲ್‌ರವರು ಏನು ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆಯೋ ಅದು ದೇಶದ ಹಿತದೃಷ್ಟಿಯಿಂದ ವ್ಯಕ್ತಪಡಿಸಿದ ಅಭಿಪ್ರಾಯವಲ್ಲ ಎಂದು ನಾನು ಇಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಒಂದು ವಿಷಯವನ್ನು ತಾವು ಇಲ್ಲಿ ಸ್ಪಷ್ಟಪಡಿಸಬೇಕು. ಈಗ ರೂಲ್ಸು ಇದರಲ್ಲಿ ಯಾವ ಬಗ್ಗೆ ನರಿಯಾದ ನಿರ್ದಿಷ್ಟವಾಗಿ ಹೇಳಿಲ್ಲ ಎನ್ನುವ ಭಯ ವಿದ್ದರೆ, ತಾವು ಇಲ್ಲಿ ಬೇರೆ ಭಾಷೆಯಲ್ಲಿ ಮಾತನಾಡಬಾರದು ಎಂದು ಹೇಳಿದರೆ, ತಾವು ಅಂತಹ ಕಾನೂನನ್ನು ಸಸ್‌ಪೆಂಡು ಮಾಡಲಕ್ಕೂ ತಮಗೆ ಅಧಿಕಾರವಿದೆ. ಅದನ್ನು ಮಾಡಿದರೆ ಅಂತಹ ತಪ್ಪೇನೂ ಆಗುವುದಿಲ್ಲ. ತಾವು ದೊಡ್ಡಮನಸ್ಸು ಮಾಡಬೇಕು. ನಾನು ಏನು ಹೇಳುತ್ತೇನೆ ಎನ್ನುವುದನ್ನು ತಾವು ಕೃಪೆಮಾಡಿ ಕೇಳಬೇಕು. ಮಾನ್ಯ ಸಚಿವರು ಮೂರು ವಾಕ್ಯಗಳನ್ನು ಅಥವಾ ಎರಡು ವಾಕ್ಯಗಳನ್ನು ಇಂಗ್ಲಿಷಿನಲ್ಲಿ ಹೇಳಿದ್ದರೆ ಅದನ್ನು ಪುನಃ ಕನ್ನಡದಲ್ಲಿ ಹೇಳಿದರೆ ತಪ್ಪೇನೂ ಆಗುವುದಿಲ್ಲ. ಇದರ ಉದ್ದೇಶವೇನು ಎನ್ನುವುದನ್ನು ಸರಿಯಾಗಿ ತಿಳಿದುಕೊಂಡಿಲ್ಲ. ಸರ್ವರ ಸಮ್ಮತಿಯಿಂದ ಮಂತ್ರಿಗಳು ಇಂಗ್ಲೀಷಿನಲ್ಲಿಯೇ ಮಾನ್ಯ ಮಂತ್ರಿಗಳು ಮಾತನಾಡಬೇಕೆಂದು ಅವರ ರೈಟ್ಸ್ ಗಳನ್ನು ಎಕ್ಸರ್‌ಸೈಸು ಮಾಡುವುದಿಲ್ಲ ಎಂದು ನಾನು ನಂಬಿಕೊಂಡಿದ್ದೇನೆ. ಅವರಿಗೂ ಈ ಒಂದು ಪ್ರಶ್ನೆಯ ಗುರುತ್ವ ಮತ್ತು ಹಾಗೂ ಇದರ ಗಂಭೀರತೆ ಏನು ಎನ್ನುವುದು ಗೊತ್ತು ಎಂದು ನಾನು ತಿಳಿದುಕೊಂಡಿದ್ದೇನೆ. ತಾವು ಈ ಮಾನ್ಯ ಸಭೆಯ ಅಭಿಪ್ರಾಯವನ್ನು ದೇಶದ ಅಭಿಪ್ರಾಯ ಎಂದು ತಿಳಿದುಕೊಳ್ಳಬೇಕೆಂದು ಹೇಳುತ್ತೇನೆ. ಮಾನ್ಯ ಸಚಿವರನ್ನು ನಾನು ಕೇಳಿಕೊಳ್ಳುವುದು, ಅವರ ಭಾಷಣವನ್ನು ಕನ್ನಡದಲ್ಲಯೇ ಮಾಡಿದರೆ ಈ ರಾಜ್ಯಕ್ಕೆ ಒಳ್ಳೆಯ ಗೌರವ ತಂದಂತಾಗುತ್ತದೆ ಎಂದು ನಾನು ಅಶಿಸುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಇಷ್ಟು ಹೇಳಿದಮೇಲೆ ಮಾನ್ಯ ಸದಸ್ಯರು ಇನ್ನುಮುಂದೆ ಪುನಃ ಎದ್ದು ನಿಂತು ಹೀಗೆ ಮಾಡುತ್ತೇನೆ, ಹಾಗೆ ಮಾಡುತ್ತೇನೆ ಎಂದು ಹೇಳುವುದಕ್ಕೆ ಹೋಗಬಾರದು. ನನ್ನ ಅಪೇಕ್ಷೆ ಹಾಗೂ ನಾನು ಏನಂತಿ ಮಾಡಿಕೊಳ್ಳುವುದು ನಿಯಮಗಳ ಪ್ರಕಾರ ಏನಿದೆಯೋ ಅದಕ್ಕೆ ವಿರುದ್ಧವಾಗಿ ನಡೆಯಲು ಸಾಧ್ಯವಿಲ್ಲ ಎಂದು ಮತ್ತೆ ಮತ್ತೆ ಇಲ್ಲಿ ಹೇಳಬೇಕಾಗಿಲ್ಲ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಸ್ವಾಮಿ, ನಾನು ಕನ್ನಡದ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಗೋಪಾಲಗೌಡರು ಎಷ್ಟು ಅಭಿಮಾನ ಹೊಂದಿದ್ದಾರೋ ಅಷ್ಟೇ ಅಭಿಮಾನವನ್ನು ನಾನೂ ಹೊಂದಿದ್ದೇನೆ ಎಂದು ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಅದಕ್ಕಿಂತ ಹೆಚ್ಚಾಗಿ ಇದೆ ಎಂದು ಹೇಳಿದರೆ ಬಹುಶಃ ಮಾನ್ಯ ಸದಸ್ಯರು ತಮಗೆ ಅಗೌರವವೆಂದು ತಿಳಿದಾರು.

Mr. SPEAKER.—The House will now rise and meet after half-an-hour.

*The House adjourned for recess at Ten of the Clock and reassembled at Thirty Minutes past Ten of the Clock.*

[MR. SPEAKER in the Chair]

Mr. SPEAKER.—Everybody is happy. It is for the Hon'ble Minister to choose in which language he should speak.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಅಧ್ಯಕ್ಷರೆ, ಸ್ವಲ್ಪ ಹೊತ್ತಿಗೆ ಮೊದಲು ನಾನು ಹೇಳುತ್ತಾ ಇದ್ದೆನು.....

Sri B. R. SUNTHANKAR (Belgaum City).—Sir, one thing. According to rules.....

Mr. SPEAKER.—Is Sri B. R. Sunthankar raising a point of order?

Sri B. R. SUNTHANKAR.—Yes Sir. The Hon'ble Member started in English. According to the rules and convention he should continue in the same language. Now, he has started in Kannada. He is not following the rules.

Mr. SPEAKER.—The Hon'ble Member has not understood the sense of the House before the House adjourned for Tea. I think the Hon'ble member was not present.

Sri B. R. SUNTHAKAR.—I was present.

Mr. SPEAKER.—Then the House granted him leave to speak in Kannada.

Sri B. R. SUNTHANKAR.—When once the Hon'ble Minister begins in a particular language, he should continue in the same language till the end according to Rules.

Mr. SPEAKER.—The Chair has got the right to permit him to speak in any language after obtaining the sense of the House. The Hon'ble member says as per rules, he should not change. Which rule or which part of the rule is he referring to?

Sri V. S. PATIL.—I feel a bit doubtful either to support or not. The position is rather embarrassing. The convention so far in our Legislature is that when a member starts in a particular language, he is to continue in the same language. If the Hon'ble Minister had started in Kannada, we would have not opposed. But the Hon'ble Minister started in English and changed to Kannada. When the Hon'ble Minister was trying to express in English, why other members should take objection? It is really embarrassing to us. My humble request is that convention hitherto followed should be followed in this case also. We should not try to take shelter that either the Chair or the House permitted him to change from English to Kannada. If he wants to speak in Kannada only, we have absolutely no objection. But he starts in English and changes into Kannada. If the Hon'ble Minister yields to the wishes of some bigoted people, we the Marathi people have no place in the House.

Sri K. LAKKAPPA.—He is using the word "bigoted", Sir.

Mr. SPEAKER.—Is the word "bigoted" unparliamentary? No, it is not. When we are getting into rough weather?

Sri G. V. GOWDA.—Convention is there. But the House has permitted him to change over to Kannada.

† Sri GANJI VEERAPPA (Harihar).—I do not understand the difficulty of some of the members. The Hon'ble Minister no doubt

wanted to start in English. Perhaps he wanted to respect the views of several members of the House. The difficulty for him is the Speaker's permission. Consensus of opinion in this House is to speak in Kannada. The Chair has permitted him to speak in Kannada. I request the Chair to permit him to continue in Kannada.

† Sri ANNA RAO GANAMUKHI (Afzlapur).—Ordinarily, mother tongue, Hindi or English could be used in this House. It is absolutely left to the choice of the member to speak either in English, Kannada or Hindi. If a member begins in a particular language, he should continue and finish it in that language only. That is the convention. It is not changing to any other language on the pursuation of other members.

ಶ್ರೀ ಎಸ್. ಎಸ್. ಕೊಳ್ಕೆಬೈಲ್ (ಕುಂದಾಪುರ).—ಪಾಯಿಂಟ್ ಆಫ್ ಆರ್ಡರ್, ಎಂದರೆ, ಕ್ರಿಯಾಲೋಪದ ಮೇಲೆ ಅವರು ಮಾತನಾಡಿದ ಮೇಲೆ.....

Mr. SPEAKER,—He is not yielding.

Sri S. M. KRISHNA.—The House is siezed of the point of order. Sri Annarao Ganamukhi is trying to enlighten us on the point of order. Now how can Sri Kolke Bail raise a point of order? First extinguish this and then only take up the point of Sri Kolke Bail, Sir.

ಶ್ರೀ ಎಸ್. ಎಸ್. ಕೊಳ್ಕೆಬೈಲ್.—ಸ್ವಾಮಿ, 26-1-1965ರ ನಂತರ ಹಿಂದೀ ಭಾಷೆಯು ಅಧಿಕೃತ ಭಾಷೆಯಾಗಿದೆ. ನಮ್ಮ ರಾಜ್ಯದ ಮಟ್ಟಿಗೆ ಕನ್ನಡವು ರಾಜ್ಯಭಾಷೆಯಾಗಿದೆ. ಆದುದರಿಂದ ಇಂಗ್ಲೀಷಿನಲ್ಲಿ ಮಾತನಾಡಲು ಅಧಿಕಾರವಿಲ್ಲ. ಇದರ ಬಗ್ಗೆ ತೀರ್ಮಾನ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

Mr. SPEAKER.—What was the Hon'ble Member doing when I was talking in English all through.

Sri ANNA RAO GANAMUKHI.—Supposing I begin in English and if the House opposes and if you take the consensus of the House and impose it on me to discontinue that English, I will certainly oppose it. If the member begins in a particular language, let him do so. But, once he begins in a particular language, he must be left to continue. Just because other Members interfere and therefore he must discontinue against his will, is not a healthy convention. I have got as much respect for regional language as any body else. But, we should not insist on any other consideration. In many instances many members speak in English, but no member is taking objection.

Mr. SPEAKER.—I thought, when the Hon'ble Member, Sri Annarao wanted to enlighten me, that he would do so. But, I stand disillusioned, because there is no enlightenment at all. Not a single new idea was contributed by him. If I had known that earlier, I would not have allowed him.

Sri ANNA RAO GANAMUKHI.—I am sorry, Sir.

Mr. SPEAKER.—I am glad that the member has enlightened his own mind.

† ಶ್ರೀ ಎಸ್. ಶಿವಪ್ಪ.—ಸ್ವಾಮಿ, ಇದು ಬಹಳ ಪ್ರಾಮುಖ್ಯವಾದ ವಿಚಾರ. ನನ್ನ ಮಾನ್ಯ ಮಿತ್ರರೊಬ್ಬರು ಒಂದು ಕ್ರಿಯಾಲೋಪವನ್ನು ಎತ್ತಿದ್ದರಿಂದ ಈ ದಿವಸ ಸಭೆಯಲ್ಲಿ ಒಂದು ಅತಿ ಪ್ರಾಮುಖ್ಯವಾದ ಪ್ರಶ್ನೆಯುದ್ಭವಿಸಿದೆ. ಈ ದಿವಸ ಮಾನ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿನಬೇಕೆಂದಿದ್ದ ಮನೂಡೆಯನ್ನು ಸಭೆಯ ಮುಂದೆ ಇಡತಕ್ಕ ಕಾಲದಲ್ಲಿ ಅವರು ಸ್ವಾಭಾವಿಕವಾಗಿ ಇಂಗ್ಲೀಷಿನಲ್ಲಿ ಮಾತನಾಡುವುದಕ್ಕೆ ಪ್ರಾರಂಭಿಸಿದರು. ಬಹುಶಃ ಅವರು ಅದನ್ನು ಮೊಮೂಲಾಗಿ ಇಂಗ್ಲೀಷಿನಲ್ಲೇ ಮಂಡಿನಬೇಕೆಂಬ ಉದ್ದೇಶವಿದ್ದಿರಬಹುದು. ಅದರೆ ಹಾಗೆ ಅವರು

(ಶ್ರೀ ಎಸ್. ಶಿವಪ್ಪ)

ಇಂಗ್ಲೀಷಿನಲ್ಲಿ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ ತಕ್ಷಣವೇ ಸಭೆಯಲ್ಲಿರತಕ್ಕ ಮಾನ್ಯ ಸದಸ್ಯರೊಬ್ಬರು ಕನ್ನಡದಲ್ಲಿ ಮಾತನಾಡಬೇಕೆಂದು ಅಧ್ಯಕ್ಷರಲ್ಲಿ ಅರಿಕೆ ಮಾಡಿಕೊಂಡರು. ಅದಕ್ಕನುಸಾರವಾಗಿ ಮಾನ್ಯ ಮಂತ್ರಿಗಳೂ ಕೂಡ ಕನ್ನಡದಲ್ಲೇ ಮಾತನಾಡುವುದಕ್ಕೆ ಒಪ್ಪಿದರು. ಆ ಪ್ರಶ್ನೆ ತೀರ್ಮಾನವಾಗಿದೆ. ಆದರೆ ಯಾರು ಈ ದಿವಸ ಮನೂದೆಯನ್ನು ಮಂಡಿಸಲು ಹೊರಟಿದ್ದಾರೋ ಅವರಿಗೆ ಕನ್ನಡದಲ್ಲಿ ಭಾಷಣಮಾಡುವುದಕ್ಕೆ ಬಾರದಿದ್ದಾಗ ಅವರನ್ನು ಒತ್ತಾಯ ಮಾಡಿ ಕನ್ನಡದಲ್ಲೇ ಮಾತನಾಡಬೇಕೆಂದು ಹೇಳತಕ್ಕ ಪ್ರಶ್ನೆ ಇಲ್ಲಿ ಬಂದಿಲ್ಲ. ಅವರಿಗೆ ಕನ್ನಡದಲ್ಲೂ ಮಾತನಾಡುವುದಕ್ಕೆ ಬರುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳೂ ಕೂಡ ಕನ್ನಡದಲ್ಲೇ ಮಾತನಾಡುವುದಕ್ಕೆ ಅವರಿಗೂ ಇಷ್ಟವಿದೆ ಎಂಬುದನ್ನು ಒಂದು ಸೂಚನೆಯ ರೂಪದಲ್ಲಿ ಈಗಾಗಲೇ ತೋರಿಸಿದ್ದಾರೆ. ಆದರೆ ಅವರಿಗೆ ಬಹುಶಃ ಅಧ್ಯಕ್ಷರ ಒಂದು ಅನುಮತಿ ಬೇಕಾಗಿರುತ್ತದೆಂದು ಕಂಡುಬರುತ್ತದೆ. ಅದಕ್ಕೆ ತಾವು ಅನುಮತಿ ಕೊಟ್ಟರೆ ಇದೆಲ್ಲವೂ ಸರಿಹೋಗುತ್ತದೆಂದು ಕಾಣುತ್ತದೆ.

**Mr. SPEAKER.**—Before I deal with the Point of Order, I wish to make one appeal and a very sincere appeal to all the Members. Because an idea is coming up uppermost in their mind, they must not feel that they must participate in the Debate immediately regardless of other considerations. If a Point of Order is raised basically, there is no scope or Debate. But, suppose some Member feels that there is something new which he is going to contribute and assist the House and the Speaker in coming to a conclusion, it is permitted because wisdom is no monopoly of any individual. But on a Point of Order, Debate is not permitted. Therefore, Member should not request me to permit a Debate of that type. Just because the Members request I have to take the risk of permitting. Hereafter I will not permit any Debate on a Point of Order. If I ask Members, if I feel it is complicated, then alone they may say something.

This Point of Order has been raised by Sri B. R. Sunthankar. The Point of Order is that having once started to speak in English, he has no right to change, and Sri V. S. Patil trying to support it, reduced it from the breach of Rule to breach of Convention. If there is a Rule, there is no Convention on the same point. Convention exists where there is no rule; Convention exists where there is no document. If there is a rule, convention cannot be contrary to the rule. Therefore, convention does not come in. Sri Sunthankar will kindly tell me the number of the rule he referred to ?

**Sri B. R. SUNTHANKAR.**—There is no rule, Sir. I only just mentioned because the chair referred to breach of procedure.

**Mr. SPEAKER.**—So, it is not a breach of Rule. How far have we gone ? I am not at all finding fault with anybody. Let us have clear ideas and let us go according to the procedure that has to be followed. If there is no rule, one has to rely only on his convention. This does not mean that the House has no right or the Speaker has no right. Sri Ganji Veerappa appealed for the suspension of the rule. There is no rule that prohibits. What stands in the way is the convention that he has no right to change. The convention is, change cannot be done without the permission of the Speaker. The Speaker may try to assess the opinion of the House, and in doing so, there is nothing wrong. I said, I am not going to permit. But, when I find large number of Members

willing to contribute something, should I not respect them? That is why I gathered the sense of the House. Though it was my Ruling, I said: "I am prepared to reconsider it". The point was that one of the Hon'ble Members wanted the House to believe and wanted me to believe, unless he is permitted, the work of the House cannot go on. If he does not change this attitude, I should be allowed to uphold the dignity of the House. It is the House that decides, and as a representative, the Speaker decides. It is in that light I was saying that I am going to give permission. Let us not spend more time over it. Therefore, there is no merit in the Point of Order and it can be continued.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರು ಎಲ್ಲ ವಿಚಾರಗಳನ್ನೂ ತೀರ್ಮಾನ ಮಾಡುತ್ತಾರೆ. ಆದರೆ ಮಹಾ ಶಿವರಾತ್ರಿಯ ವಿಚಾರ ಮಾತ್ರ ತಿಳಿಸಲಿಲ್ಲ.....

Mr. SPEAKER.—The suggestion was that we might not sit on Sivaratri Day. The members will kindly remember this. It is only presentation of the Budget; the delivery of the speech by the Hon'ble Minister for Finance. The Convention is that we must not transact any other business on that day, because Members require time to study the Budget. That is why the Debate on the Budget is postponed. It is with a view to maximise the utility of the period for which we are spending tax-payers money, that was arranged. There is nothing wrong. because in some of the other Legislatures they are working the whole day.

Our sitting is not anything which offends the rules nor is it illegal. I would only suggest one thing so that the Members may again go back for their prayers or other religious observances, that we will meet at 9-30 a.m. just for half an hour. The Hon'ble Minister will finish the speech and everybody can go back and it will be also convenient to go to their respective houses which are nearby. I therefore suggest that we may meet at 9-30 a.m.

Sri B. D. JATTI (Minister for Finance).—I agree.

Mr. SPEAKER.—The next point is this: I may utilise this opportunity to point out how difficult it will be for the Finance Minister to deliver the speech in Kannada using all technical expressions in Kannada. The Hon'ble Member knows that Budget is a technieal word and I do not know whether there is any appropriate translation for the word 'budget'?

ಶ್ರೀ ಎಸ್. ಗೋಪಾಲಗೌಡ.—ನಾನು ಈ ವಿಚಾರದಲ್ಲಿ ಪತ್ರವನ್ನೇ ಬರೆಯಬೇಕೆಂದಿದ್ದೆ. ಮೊದಲನೆಯ ಸಲ ಆಯವ್ಯಯ ಪಟ್ಟಿಯನ್ನು ಕನ್ನಡದಲ್ಲೇ ಮಂಡಿಸುವುದಕ್ಕೆ ತಾವು ಹೇಳಿದಹಾಗೆ ಕೆಲವು ಶಬ್ದಗಳ ಕೊರತೆಯಿದೆ. ಕೆಲವು ವೇಳೆ ಬೇರೆ ಶಬ್ದಗಳನ್ನು ಕನ್ನಡದಲ್ಲಿ ಉಪಯೋಗಿಸಿದರೆ ಸಂಪೂರ್ಣವಾದ ಅರ್ಥ ಕೊಡದಿರಬಹುದು. ಅಂಥ ಸಂದರ್ಭಗಳಲ್ಲಿ ಕೆಲವನ್ನು ಆವರಣದಲ್ಲಿ ಉಪಯೋಗಿಸಬಹುದು; ಆಯವ್ಯಯ ಎಂದರೆ ಬಡ್ಜೆಟ್ ಎಂದು ಬೇಕಾದರೆ ನಮೂದಿಸಬಹುದು. ಹಾಗೆ ಮಾಡಲು ನನ್ನ ಅಭ್ಯಂತರವಿಲ್ಲ. ಇಂದು ತಾವು ಈ ಪ್ರಸ್ತಾಪ ಮಾಡಿದ್ದು ಬಹಳ ಒಳ್ಳೆಯದೇ ಆಯಿತು. ಹೇಗಾದರೂ ಕನ್ನಡದಲ್ಲಿ ಬಡ್ಜೆಟ್ ಭಾಷಣವನ್ನು ಅಚ್ಚು ಮಾಡೇ ಮಾಡುತ್ತಾರೆ.

ಅಧ್ಯಕ್ಷರು.—ಒಂದು ವೇಳೆ ಸಚಿವರು ಇಂಗ್ಲೀಷಿನಲ್ಲಿ ಭಾಷಣ ಮಾಡುವುದಾದರೆ ಕನ್ನಡದಲ್ಲೇ ಮಾಡಬೇಕೆಂದು ನಾನು ಒತ್ತಾಯ ಮಾಡುವಂತೆ ಹೇಳುವುದಕ್ಕೆ ಅವಕಾಶವಾಗುವುದು ಬೇಡ. ಬೇಕಾದರೆ ಸಚಿವರಿಗೆ ಹೊರಗೆ ಒತ್ತಾಯಮಾಡಿ. ಇಲ್ಲಿ ನಾನು ಒತ್ತಾಯ ಮಾಡುವುದು ಬೇಡ.

ಶ್ರೀ ಎಸ್. ಶಿವಪ್ಪ.—ಇದು ಬಹಳ ವ್ಯಾಪಕವಾದ ವಿಚಾರ. ಈ ಭಾಷಾ ಗೊಂದಲ ಬಹಳವಾಗಿ ಬೆಳೆದಿದೆ. ಮೈಸೂರು ದೇಶಕ್ಕೆ ದಕ್ಷಿಣ ರಾಜ್ಯದಲ್ಲಿ ವ್ಯಾಪಕವಾದ ಸ್ಥಾನವಿದೆ. ಭಾಷಾ ಗೊಂದಲ ಎದ್ದಿರುವುದೂ ಕೂಡ ದಕ್ಷಿಣ ದೇಶದಲ್ಲೇ. ಆದಕ್ಕಾಗಿ ನಾನು ಹಣಕಾಸಿನ ಸಚಿವರಿಗೆ ಹೇಳುವುದು ಅವರ ಭಾಷಣ ಕನ್ನಡ ಮತ್ತು ಇಂಗ್ಲೀಷು ಭಾಷೆಗಳೆರಡರಲ್ಲೂ ಇರಲಿ ಎಂದು. ಏಕಂದರೆ, ಪಬ್ಲಿಸಿಟಿ ಪಾಯಿಂಟ್‌ನಿಂದ ಇಂಗ್ಲೀಷಿನಲ್ಲಿರಬೇಕು. ಕನ್ನಡದಲ್ಲಿರುವ ಭಾಷಣವನ್ನು ಕೆಲವು ಪುಟಗಳವರೆಗೆ ಸ್ವಲ್ಪಹೊತ್ತು ಸಂಕ್ಷೇಪವಾಗಿ ಓದಿ ನಂತರ ಇಂಗ್ಲೀಷಿನಲ್ಲಿ ಓದ ಬಹುದು. ಹೀಗೆ ಮಾಡಬಹುದು. ರಾಷ್ಟ್ರಾಧ್ಯಕ್ಷರೂ ಸಹ ಹಾಗೆಯೇ ಮಾಡಿದ್ದಾರೆ, ಮೊದಲು ಅವರು ಸ್ವಲ್ಪ ಇಂಗ್ಲೀಷಿನಲ್ಲೋದಿ ನಂತರ ಉಪರಾಷ್ಟ್ರಪತಿಗಳು ಹಿಂದಿಯಲ್ಲಿ ಅವರ ಭಾಷಣ ಓದು ವಂತೆ ಹೇಳಿದರು. ಹಾಗೆ ಇಲ್ಲೂ ಕೂಡ ಕನ್ನಡ ಭಾಷೆಯಲ್ಲಿ ಸಂಕ್ಷಿಪ್ತ ವರದಿಯನ್ನು ಓದಿ ನಂತರ ಇಂಗ್ಲೀಷಿನಲ್ಲಿ ಮುಂದುವರೆಸಬಹುದು. ಎಲ್ಲವನ್ನೂ ಕನ್ನಡಕ್ಕೆ ತರ್ಜುಮೆ ಮಾಡುವುದು ಕಷ್ಟ. ಬಹಳ ಪುಟಗಳಿರುವುದರಿಂದ ಪೀಠಿಕಾ ರೂಪದಲ್ಲಿ ಸಂಕ್ಷಿಪ್ತ ವರದಿಯನ್ನು ಕನ್ನಡದಲ್ಲಿ ಓದಿ ನಂತರ ಇಂಗ್ಲೀಷಿನಲ್ಲಿರುವುದನ್ನು ಓದಿದರೆ ಒಳ್ಳೆಯ ಪೀಠಿಕೆ ಹಾಕಿದಂತಾಗುತ್ತದೆ.

ಅಧ್ಯಕ್ಷರು.—ನಾನು ಒತ್ತಾಯ ಮಾಡುವುದಕ್ಕೆ ಸಾಧ್ಯವಿಲ್ಲ ಅವರು ಏನು ಬೇಕಾದರೂ ಮಾಡಲಿ. It only leads us to the position that the use of English is inevitable for some time till we have got our dictionary compiled and we have appropriate words and new expressions.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಕನ್ನಡದಲ್ಲೇ ಓದಲಿ.

ಅಧ್ಯಕ್ಷರು.—ಕನ್ನಡದಲ್ಲೇ ಓದಬೇಕಾದರೆ ಇಂಗ್ಲೀಷಿನಲ್ಲಿರುವ ಕೆಲವು ಪದಗಳನ್ನು ಸರಿಯಾಗಿ ತರ್ಜುಮೆ ಮಾಡುವುದಕ್ಕೆ ಬರುವುದಿಲ್ಲ. ಕನ್ನಡದಲ್ಲಿ ಮಾತನಾಡಿದ ಮೇಲೆ ಮತ್ತೆ ಇಂಗ್ಲೀಷಿನಲ್ಲಿ ಮಾತನಾಡಲು ಅವಕಾಶ ಕೊಟ್ಟರೆ ಪುನಃ ತೊಂದರೆ ಬರುತ್ತದೆ. ಹೇಗಿದ್ದರೂ ಕನ್ನಡದಲ್ಲಿ ಪ್ರಿಂಟ್ ಆಗೇ ಆಗುತ್ತದೆ.

ಶ್ರೀ ವಿ. ಎಂ. ದೇವ್.—ಇಂಗ್ಲೀಷು ಮಾತೃ ಭಾಷೆಯಲ್ಲ. ಅಭಿಪ್ರಾಯ ಮತ್ತು ವಿಷಯ ಚೆನ್ನಾಗಿ ಗೊತ್ತಾಗಬೇಕಾದರೆ ಮಾತೃ ಭಾಷೆಯಲ್ಲೇ ಇರುವುದು ಸೂಕ್ತ. ಸದಸ್ಯರು ತಿಳಿದು ಕೊಂಡು ಮಾತನಾಡಬೇಕಾಗಿರುವುದರಿಂದ ಕನ್ನಡದಲ್ಲೇ ಮಾತನಾಡಿದರೆ ಒಳ್ಳೆಯದು.

ಶ್ರೀ ರಾಮಕೃಷ್ಣ ಹೆಗ್ಗಡೆ.—ಸ್ಯಾಮಿ, ಕಳೆದ ವರ್ಷ ಜುಲೈ ತಿಂಗಳಿನಲ್ಲಿ ಈ ಪಂಚಾಯಿತಿ ರಾಜ್ಯದ ಮನೂದೆ ಈ ಸಭೆಯಲ್ಲಿ ಚರ್ಚೆಗೆ ಬಂದು ಸೆಲೆಕ್ಟ್ ಕಮಿಟಿಗೆ ಅದನ್ನು ಕಳುಹಿಸಬೇಕೆಂದು ಒಂದು ತೀರ್ಮಾನವಾಯಿತು. ಮತ್ತು ಅದರಂತೆ ಜಂಟಿ ಸೆಲೆಕ್ಟ್ ಕಮಿಟಿಗೆ ಈ ಮನೂದೆ ಹೋಯಿತು. ಜಂಟಿ ಸೆಲೆಕ್ಟ್ ಕಮಿಟಿಯವರು ಈ ಮನೂದೆಯ ಮೇಲೆ ಯಾರು ಯಾರು ಅಭಿಪ್ರಾಯ ವನ್ನು ವ್ಯಕ್ತಪಡಿಸಬೇಕೆಂದು ಇಚ್ಛಿಸಿದ್ದರೋ ಅಂಥವರಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶ ಕೊಟ್ಟರು.

[MR. DEPUTY SPEAKER in the Chair]

Sri V. S. PATIL.—I want one information. We have absolutely no objection for his speech in Kannada. Since he has started in English, due to the wishes of other members he has turned over to Kannada. Our desire is, he is also a Marathi man and knows Marathi. Can he assure us to give the substance of his speeeh in Marathi? That is the only thing which we are expecting.

ಶ್ರೀ ರಾಮಕೃಷ್ಣ ಹೆಗ್ಗಡೆ.—ನನಗೆ ಮರಾಠಿ ಬಾಷೆ ಎಷ್ಟು ಗೊತ್ತಿದೆಯೋ ಅದಕ್ಕಿಂತ ಹೆಚ್ಚಾಗಿ ಶ್ರೀಮಾನ್ ಪಾಟೀಲರಿಗೆ ಕನ್ನಡ ಗೊತ್ತಿದೆ. ಆದುದರಿಂದ ಮರಾಠಿಯಲ್ಲಿ ತರ್ಜುಮೆ ಮಾಡುವ ಅಗತ್ಯವಿಲ್ಲ.

ಜಂಟಿ ಸೆಲೆಕ್ಟ್ ಕಮಿಟಿಯ ವಿಚಾರ ನಾನು ಹೇಳುತ್ತಿದ್ದೆ. ಅನೇಕ ಸಂಘಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ಈ ಸಮಿತಿಯ ಮುಂದೆ ಈ ಮಸೂದೆಯ ವಿಚಾರವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತ

ಪಡಿಸಲು ಅವಕಾಶ ಮಾಡಿಕೊಟ್ಟರು. ಆ ರೀತಿ ಬಂದ ಅಭಿಪ್ರಾಯಗಳೆಲ್ಲವನ್ನೂ ಗಮನದಲ್ಲಿಟ್ಟು ಕೊಂಡು ಆಳವಾಗಿ ಚರ್ಚೆಮಾಡಿ ಸಮಿತಿಯವರು ಈ ವರದಿಯನ್ನು ಸಿದ್ಧಪಡಿಸಿದ್ದಾರೆ. ಈ ಜಂಟಿ ಸೆಲೆಕ್ಟ್ ಸಮಿತಿಯ ವರದಿಗೂ ಮತ್ತು ಮೂಲವಾಗಿ ಈ ಸಭೆಯು ಮುಂದೆ ಮಂಡಿಸಿದಂಥ ಮಸೂದೆಗೂ ಅಲ್ಲಲ್ಲಿ ಕೆಲಮಟ್ಟಿನ ಬೇಧವಿದ್ದರೂ ಕೂಡ ಮೂಲಭೂತವಾದ ದೃಷ್ಟಿಯಿಂದ ನೋಡಿದರೆ ಮತ್ತು ತಾತ್ವಿಕವಾಗಿ ನೋಡಿದರೆ ಯಾವ ವಿಶೇಷವಾದಂಥ ಬದಲಾವಣೆಯೂ ಆಗಿರುವುದಿಲ್ಲ.

11-00 A.M.

ಯಾವ ಯಾವ ವಿಚಾರಗಳಲ್ಲಿ ಬದಲಾವಣೆಯಾಗಿದೆಯೋ ಅದನ್ನು ನಾನು ಸಂಕ್ಷೇಪವಾಗಿ ಈ ಸಭೆಯ ಮುಂದೆ ವಿವರಿಸಲಕ್ಕೆ ಬಯಸುತ್ತೇನೆ.

ಮೂಲ ಮಸೂದೆಯಲ್ಲಿ ಪಂಚಾಯಿತಿ ರಾಜ್ಯ ಸ್ವರೂಪ ಮೂರು ಘಟ್ಟದಲ್ಲಿ ಇರಬೇಕು, ಗ್ರಾಮ ಮಟ್ಟದಲ್ಲಿ ಒಂದು ಸಂಸ್ಥೆ, ತಾಲ್ಲೂಕು ಮಟ್ಟದಲ್ಲಿ ಒಂದು ಸಂಸ್ಥೆ ಮತ್ತು ಜಿಲ್ಲಾ ಮಟ್ಟದಲ್ಲಿ ಒಂದು ಸಂಸ್ಥೆ ಇರುವಂಥದ್ದನ್ನು ಜಂಟಿ ಸಮಿತಿಯವರು ಒಪ್ಪಿದ್ದಾರೆ. ಆದರೆ ಈ ಸಂಸ್ಥೆಗಳ ರಚನೆ ಮತ್ತು ಅರಿಸತಕ್ಕ ವಿಧಾನದಲ್ಲಿ ಬದಲಾವಣೆಯನ್ನು ಈ ಸಮಿತಿಯವರು ಸೂಚಿಸಿದ್ದಾರೆ. ಈ ಬದಲಾವಣೆ ಮುಖ್ಯವಾಗಿ ತಾಲ್ಲೂಕು ಬೋರ್ಡ್ ರಚನೆಗೆ ಸಂಬಂಧಪಟ್ಟದ್ದು. ಮೂಲ ಮಸೂದೆಯಲ್ಲಿ ತಾಲ್ಲೂಕು ಬೋರ್ಡಿನ ಸದಸ್ಯರಲ್ಲಿ ಅರ್ಧದಷ್ಟು ಪ್ರತ್ಯಕ್ಷ ಚುನಾವಣೆಯಿಂದ ಮತ್ತು ಇನ್ನರ್ಧದಷ್ಟು ಪರೋಕ್ಷವಾದ ಚುನಾವಣೆಯಿಂದ ಆರಿಸಲ್ಪಡಬೇಕು ಎಂದು ಇತ್ತು. ಆದರೆ ಜಂಟಿ ಸೆಲೆಕ್ಟ್ ಸಮಿತಿಯವರು ಪ್ರತ್ಯಕ್ಷವಾದ ಚುನಾವಣೆ ಅಪ್ರತ್ಯಕ್ಷವಾದ ಚುನಾವಣೆಗಿಂತ ಉತ್ತಮವಾದುದು, ಅದಕ್ಕಾಗಿ ಯಾವ ರೀತಿಯಲ್ಲಿ ಗ್ರಾಮ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಪ್ರತ್ಯಕ್ಷ ಚುನಾವಣೆ ಆಗಬೇಕಾಗಿದೆಯೋ ಅದೇ ರೀತಿ ತಾಲ್ಲೂಕು ಮಟ್ಟದಲ್ಲಿಯೂ ಕೂಡ ಎಲ್ಲ ಸದಸ್ಯರೂ ಪ್ರತ್ಯಕ್ಷವಾಗಿ ಚುನಾವಣೆಯಲ್ಲಿ ಆರಿಸಿ ಬರಬೇಕು ಎಂದು ಸಿಫಾರಸು ಮಾಡಿದ್ದಾರೆ. ಮಾನ್ಯ ಸದಸ್ಯರಿಗೆ ನೆನಪಿರಬಹುದು, ಈಗ ಇರತಕ್ಕ ಪದ್ಧತಿಯೂ ಕೂಡ ಪ್ರತ್ಯಕ್ಷ ಚುನಾವಣಾ ಪದ್ಧತಿಯೇ ಆಗಿದೆ.

ಎರಡನೆಯದಾಗಿ ಮುಖ್ಯವಾದ ಬದಲಾವಣೆ ಈ ಮೂರು ಸಂಸ್ಥೆಗಳಿಗೂ ಕೊಡಬೇಕಾದಂಥ ಆರ್ಥಿಕ ಸಹಾಯ. ಪಂಚಾಯಿತಿ ಕಾಯಿದೆ ಪ್ರಕಾರ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡ್ ಈ ಎರಡು ಮಟ್ಟದ ಸಂಸ್ಥೆಗಳಿಗೂ ಒಟ್ಟು ಸೇರಿ ನೂರರಲ್ಲಿ 60ರಷ್ಟು ಕಂದಾಯದ ಭಾಗವನ್ನು ಕೊಡಬೇಕು ಎಂದು ಇದೆ. ಈಗ ಮೂರು ಮಟ್ಟದ ಸಂಸ್ಥೆಗಳನ್ನು ನಿರ್ಮಾಣ ಮಾಡುವುದರಿಂದ ಸ್ವಲ್ಪ ಹೆಚ್ಚಿಗೆ ಕಂದಾಯದಲ್ಲಿ ಭಾಗವನ್ನು ಕೊಡಬೇಕೆಂದು ಒಪ್ಪುವುದಾದರೂ ಕೂಡ ಮೊದಲು ಮೂಲ ಮಸೂದೆಯಲ್ಲಿ ಇದ್ದುದರಲ್ಲಿ ಸ್ವಲ್ಪಮಟ್ಟಿಗೆ ಬದಲಾವಣೆಯನ್ನು ಈ ಶಿಫಾರಸಿನಲ್ಲಿ ನೋಡಬಹುದು. ಅದು ಹೇಗೆಂದರೆ, ಗ್ರಾಮ ಪಂಚಾಯಿತಿಗಳಿಗೆ ಕಂದಾಯದಲ್ಲಿ ನೂರಕ್ಕೆ ಮುವ್ವತ್ತು ಭಾಗ ಮತ್ತು ತಾಲ್ಲೂಕು ಬೋರ್ಡಗಳಿಗೆ ಮುವ್ವತ್ತು ಭಾಗ ಕೊಡಬೇಕು ಮತ್ತು ಜಿಲ್ಲಾ ಪರಿಷತ್ತುಗಳಿಗೆ ನೂರರಲ್ಲಿ ಹತ್ತು ಭಾಗ ಕೊಡಬೇಕೆಂದು ಶಿಫಾರಸು ಮಾಡಲಾಗಿದೆ. ಒಟ್ಟು ನೂರರಲ್ಲಿ 70 ಭಾಗವನ್ನು ಕೊಟ್ಟಂತಾಯಿತು. ಇನ್ನು ನೂರರಲ್ಲಿ ಏಳೂವರೆ ಭಾಗ ಯಾವ ಯಾವ ಪ್ರದೇಶದಲ್ಲಿ ಈ ರೀತಿ ಕಂದಾಯವನ್ನು ಹಂಚುವುದರಿಂದಲೂ ಕೂಡ ಸಾಕಷ್ಟು ವರಮಾನ ಅಲ್ಲಿಯ ಪರಿಸ್ಥಿತಿ, ಅಲ್ಲಿಯ ಜನಸಂಖ್ಯೆ ಮತ್ತು ಅಲ್ಲಿಯ ಸಾಮಾನ್ಯವಾದ ಅಭಿವೃದ್ಧಿ ಮಟ್ಟ ಇವುಗಳನ್ನು ಗಣನೆಗೆ ತೆಗೆದುಕೊಂಡು ನೋಡಿದರೆ ಸಾಕಾಗುವುದಿಲ್ಲವೋ ಅವುಗಳಿಗೆ ಹಂಚುವುದಕ್ಕೋಸ್ಕರವಾಗಿ ರಿಸರ್ವ್ ಇಡಬೇಕು ಎಂದು ಶಿಫಾರಸು ಮಾಡಿದ್ದಾರೆ. ಮತ್ತೊಂದು ಏಳೂವರೆ ಭಾಗ ಯಾವ ಪಂಚಾಯಿತಿಗಳು ಮತ್ತು ತಾಲ್ಲೂಕು ಬೋರ್ಡ್‌ಗಳು, ಜಿಲ್ಲಾ ಪರಿಷತ್ತುಗಳು ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತವೆಯೋ, ಒಗ್ಗಟ್ಟಿನಿಂದ ಕೆಲಸ ಮಾಡುತ್ತವೆಯೋ, ಯಾವ ಸಂಸ್ಥೆಗಳಿಗೆ ಒಮ್ಮತದ ಚುನಾವಣೆ ಆಗುತ್ತದೆಯೋ ಅಂಥ ಸಂಸ್ಥೆಗಳಿಗೆ ಸ್ವಲ್ಪಮಟ್ಟಿಗಾದರೂ ಪರಿಹಾರ ಕೊಡಬೇಕು ಮತ್ತು ಆದಷ್ಟೂ ಒಮ್ಮತದಿಂದ ಇರಲಿಕ್ಕೆ ತಕ್ಕ ಆಕರ್ಷಣೆ ಇರಬೇಕು ಎನ್ನುವ ದೃಷ್ಟಿಯಿಂದ ಏಳೂವರೆ ಭಾಗವನ್ನು ಇನಸೆಂಟಿವ್ ಕೊಡಲಿಕ್ಕೆ ಮತ್ತು ಇನ್ನು ಇತರ ಕಾರಣಕ್ಕಾಗಿ ರಿಸರ್ವ್ ಮಾಡಬೇಕೆಂದು ಸಿಫಾರಸು ಮಾಡಲಾಗಿದೆ. ಅಂದರೆ ಈಗ ನಾವು ಹಂಚತಕ್ಕ ನೂರಕ್ಕೆ 60 ಭಾಗಕ್ಕೆ ಬದಲು 85 ಭಾಗವನ್ನು ಕಂದಾಯದಲ್ಲಿ ಈ ಸಂಸ್ಥೆಗಳಿಗೆ ಕೊಡಬೇಕೆಂದು ಸಮಿತಿಯವರು ಸೂಚನೆ ಮಾಡಿದ್ದಾರೆ.

ಅದರಂತೆ ಮುಖ್ಯವಾದ ಮತ್ತೊಂದು ವಿಚಾರವಿದೆ. ಅದು ಸೆಸ್‌ಗೆ ಸಂಬಂಧಪಟ್ಟದ್ದು. ಮೂಲ ಮಸೂದೆಯಲ್ಲಿ ಎಷ್ಟರಮಟ್ಟಿಗೆ ಭೂಕಂದಾಯ ಇರುತ್ತದೆಯೋ ಅದರಲ್ಲಿ ನೂರಕ್ಕೆ ನೂರರಷ್ಟು ಮೂರು ಸಂಸ್ಥೆಗಳೂ ಸೆಸ್ ಆಕರಣೆ (ಲೆವಿ) ಮಾಡಲಕ್ಕೆ ಅಧಿಕಾರ ಇರಬೇಕು ಎಂದು ಮೂಲ

(ಶ್ರೀ ರಾಮಕೃಷ್ಣಹೆಗ್ಗಡೆ)

ಮನೂಡೆಯಲ್ಲಿತ್ತು. ಇಷ್ಟು ಸೆಸ್ ಹಾಕಿದರೆ ಜನತೆಯ ಮೇಲೆ ಕರಭಾರ ಬಹಳವಾಗಿ ಆಗುತ್ತದೆ ಯಾದ್ದರಿಂದ ಅದರಲ್ಲಿ ಕಡಮೆ ಮಾಡಬೇಕು ಎಂದು ಸೆಲೆಕ್ಟ್ ಕಮಿಟಿಯವರು ಶಿಫಾರಸು ಮಾಡಿ ದ್ದಾರೆ. ಮೂಲ ಮನೂಡೆಯಲ್ಲಿ ಪಂಚಾಯಿತಿ ನೂರಕ್ಕೆ 20ರವರೆಗೂ, ತಾಲ್ಲೂಕು ಬೋರ್ಡ್ 20ರವರೆಗೂ ಮತ್ತು ಜಿಲ್ಲಾ ಪರಿಷತ್ತು ನಲವತ್ತರವರೆಗೂ ಸೆಸ್ ಹಾಕತಕ್ಕ ಅಧಿಕಾರವಿತ್ತು. ಇದನ್ನು ಅವರು ಹಾಕಲೇಬೇಕು ಎನ್ನುವ ನಿರ್ಬಂಧವಿರಲಿಲ್ಲ. ಆದರೂ ಇಂಥ ಅವಕಾಶವನ್ನು ನಂಸ್ಥೆಗಳಿಗೆ ಕೊಟ್ಟರೆ ಸಾಮಾನ್ಯವಾಗಿ ಅವರ ಸ್ವಭಾವ ಈ ಸೆಸ್‌ಗಳನ್ನು ವಸೂಲ್ಮಾಡುವುದು ಆಗುತ್ತದೆ. ಆದರೆ ಅಂಥ ಟೆಂಡನ್ಸಿಗೆ ನಾವು ಅವಕಾಶ ಕೊಡತಕ್ಕದ್ದು ನರಿಯಲ್ಲ, ಜನತೆಯ ಮೇಲೆ ಬಹಳ ಭಾರವಾಗುತ್ತದೆ ಎನ್ನುವ ಅಭಿಪ್ರಾಯ ಬಂದುದರಿಂದ ಈಗ ಪಂಚಾಯಿತಿಗೆ ನೂರಕ್ಕೆ ಹತ್ತರವರೆಗೂ, ತಾಲ್ಲೂಕು ಬೋರ್ಡ್‌ಗಳಿಗೆ ಹತ್ತರವರೆಗೂ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಹನ್ನೆರಡೂವರೆಯ ವರೆಗೂ ಸೆಸ್ ಹಾಕುವಂಥ ಅವಕಾಶವನ್ನು ಈ ಶಿಫಾರಸಿನಲ್ಲಿ ಕೊಡಲಾಗಿದೆ. ಇದರ ಹೊರತಾಗಿ ಜಿಲ್ಲಾ ಪರಿಷತ್ತಿನವರಿಗೆ ಮೂಲ ಮನೂಡೆಯಲ್ಲಿ ನೂರಕ್ಕೆ 20ರಷ್ಟು ಕಂಪಲ್ಸರಿ ಯಾಗಿ ಸೆಸ್ ಹಾಕತಕ್ಕ ಅಧಿಕಾರವನ್ನು ಕೊಡಲಾಗಿತ್ತು. ಜಂಟಿ ಸೆಲೆಕ್ಟ್ ಸಮಿತಿಯವರು ಅದೂ ಕೂಡ ಜನತೆಯ ಮೇಲೆ ಬಹಳ ಭಾರವಾಗುತ್ತದೆ, ಅದನ್ನು ಕಡಮೆ ಮಾಡಬೇಕು ಎಂದು ಶೇಕಡ ಹತ್ತಕ್ಕೆ ಇಳಿಸಿದ್ದಾರೆ. ಹೀಗೆ ಒಟ್ಟು ಸೆಸ್ ಹಾಕತಕ್ಕ ಅವಕಾಶ ಅತಿ ಹೆಚ್ಚು ಎಂದರೆ 42 ಪರ್ ಸೆಂಟ್ ಮಾತ್ರ ಇದೆ, ನೂರಕ್ಕೆ ನೂರು ಇಲ್ಲ.

ಮೂರನೆಯ ಮಹತ್ವಪೂರ್ಣವಾದ ತೀರ್ಮಾನವನ್ನು ಜಂಟಿ ಸೆಲೆಕ್ಟ್ ಸಮಿತಿಯವರು ಮಾಡಿದ್ದಾರೆ. ಅದು ಅನುಸೂಚಿತ ಜಾತಿಗಳ ಅಭಿವೃದ್ಧಿಗೆ ಸಂಬಂಧಪಟ್ಟದ್ದು. ಮೂಲ ಮಸೂದೆಯಲ್ಲಿ ಈ ಹಿಂದು ಳಿದ ಷೆಡ್ಯೂರ್ಡ್‌ಕ್ಯಾಸ್ಟ್ಸ್ ಮತ್ತು ಷೆಡ್ಯೂರ್ಡ್ ಟ್ರೈಬ್ಸ್‌ನವರಿಗೆ ಪ್ರತ್ಯೇಕವಾದ ಆರ್ಥಿಕ ಸಹಾಯ ಇರಬೇಕು ಎಂದು ಇರಲಿಲ್ಲ. ಅಂದರೆ ಪ್ಲಾನ್ ಮತ್ತು ನಾನ್ ಪ್ಲಾನ್ ಸ್ಕೀಮುಗಳಲ್ಲಿ ಯಾವ ಯಾವ ಭಾಗ ಅವರಿಗಾಗಿ ಮೀಸಲಾಗಿದೆಯೋ ಅದನ್ನು ಅವರಿಗಾಗಿ ಖರ್ಚು ಮಾಡತಕ್ಕದ್ದು ಅವರ ಕರ್ತವ್ಯ. ತಮ್ಮ ಸ್ವಂತ ಉತ್ಪನ್ನದಲ್ಲಿ ನೂರರಲ್ಲಿ ಇಷ್ಟು ಭಾಗವನ್ನು ಖರ್ಚು ಮಾಡಬೇಕು ಎನ್ನುವ ಕಡ್ಡಾಯವಾದ ಭಾಗವಿರಲಿಲ್ಲ. ಆದರೆ ನಂತೋಷದಿಂದ ನಾನು ಹೇಳುತ್ತಿದ್ದೇನೆ, ಜಂಟಿ ಸೆಲೆಕ್ಟ್ ಸಮಿತಿಯವರು ಅವರ ಅಭಿವೃದ್ಧಿ ವೇಗದಿಂದ ಆಗಬೇಕು ಎನ್ನುವ ಉದ್ದೇಶದಿಂದ ತಾಲ್ಲೂಕು ಬೋರ್ಡ್ ಮತ್ತು ಜಿಲ್ಲಾ ಪರಿಷತ್ತಿನ ಮಟ್ಟದಲ್ಲಿ ಸರ್ಕಾರದ ಗ್ರಾಂಟ್ ಸೇರಿ ಅವರ ಸ್ವಂತವಾದ ಉತ್ಪನ್ನ ಎಷ್ಟುಪಡೆಯೋ ಆ ಉತ್ಪನ್ನದಲ್ಲಿ ನೂರರಲ್ಲಿ ಎರಡೂವರೆ ಭಾಗವನ್ನು ತಾಲ್ಲೂಕು ಮಟ್ಟ ದಲ್ಲಿಯೂ, ಎರಡೂವರೆ ಭಾಗವನ್ನು ಜಿಲ್ಲಾ ಮಟ್ಟದಲ್ಲಿಯೂ ಒಟ್ಟು ನೂರರಲ್ಲಿ ಐದು ಭಾಗವನ್ನು ಪ್ರತ್ಯೇಕವಾಗಿ ಈ ಅನುಸೂಚಿತ ಜಾತಿಗಳ ಅಭಿವೃದ್ಧಿಗಾಗಿ ಮೀಸಲಾಗಿಡತಕ್ಕದ್ದು ಮತ್ತು ಅದಕ್ಕಾಗಿಯೇ ಖರ್ಚು ಮಾಡತಕ್ಕದ್ದು ಎಂದು ಶಿಫಾರಸು ಮಾಡಿದ್ದಾರೆ.

ಇವು ಮುಖ್ಯವಾದಂಥ ಬದಲಾವಣೆಗಳು. ಇನ್ನು ಕೆಲವನ್ನು ನಾನು ಅಷ್ಟೇ ಮುಖ್ಯವೆಂದು ಹೇಳುವುದಿಲ್ಲ. ಆದರೂ ಅವೂ ಕೂಡ ಮಹತ್ವವಾದಂಥ ಬದಲಾವಣೆಗಳೇ. ಅವುಗಳು ಈ ರೀತಿ ಇವೆ. ಪಂಚಾಯತಿ ಜನಸಂಖ್ಯೆ ಎಷ್ಟರ ಮಟ್ಟಿಗೆ ಇರಬೇಕೆಂಬುದನ್ನು ಗಮನಿಸಿ ಮುನಿಸಿಪಲ್ ಅಕ್ಕಿಗೆ ಇರತಕ್ಕಂಥ ಅವಕಾಶವನ್ನು ಗಮನಕ್ಕೆ ತೆಗೆದುಕೊಂಡು 15 ಸಾವಿರ ಜನಸಂಖ್ಯೆಯವರೆಗೂ ಅಲ್ಲಿಯ ಲೋಕಲ್ ಬಾಡಿ ಇಷ್ಟಪಟ್ಟರೆ ಅದನ್ನು ಟೌನ್ ಪಂಚಾಯತಿಯಾಗಿ ಪರಿಗಣಿಸತಕ್ಕದ್ದು ಎಂಬುದಾಗಿ ಈ ಸಮಿತಿಯವರು ಮಾಡಿದ್ದಾರೆ. ಇದರಲ್ಲಿ ನಿರ್ಬಂಧವೇನೂ ಇಲ್ಲ. ಇದು ಆಯಾ ಪ್ರದೇಶದ ಜನತೆಗೆ ಸಂಬಂಧಪಟ್ಟದ್ದು. ಇನ್ನು ತಾಲ್ಲೂಕ್ ಬೋರ್ಡಿಗೂ ಮತ್ತು ಪಂಚಾಯತಿಗೂ ನೇರವಾದ ಸಂಬಂಧ ಏನೊಂದು ಕಾಯದೆಯಲ್ಲಿಲ್ಲ. ಆ ರೀತಿ ಸಂಬಂಧವನ್ನು ಇಲ್ಲಿ ಕಲ್ಪಿಸುವುದ ಕ್ಕೋಸ್ಕರ ಅರ್ಧದಷ್ಟು ಸದಸ್ಯರನ್ನು ಪ್ರತ್ಯಕ್ಷ ಚುನಾವಣೆಯಿಂದ ತಾಲ್ಲೂಕ್ ಬೋರ್ಡಿಗೆ ಆರಿಸಬೇಕು ಮತ್ತು ಇನ್ನು ಅರ್ಧದಷ್ಟು ಜನರು ಪಂಚಾಯತಿಗಳಿಂದ ಆರಿಸಲ್ಪಟ್ಟ ಸದಸ್ಯರು ಇರಬೇಕು. ಮೂಲ ಮಸೂದೆಯಲ್ಲಿ ಇದು ಇತ್ತು. ತಾಲ್ಲೂಕ್ ಬೋರ್ಡಿಗೆ ಪ್ರತ್ಯಕ್ಷವಾಗಿ ಚುನಾವಣೆಯಾಗ ಬೇಕಾದರೆ ಈಗ ಈ ಯೋಚನೆ ಮಾಡಿರತಕ್ಕ ಸಂಬಂಧ ತಪ್ಪಿಹೋಗುತ್ತದೆ. ಈಗಿನ ಶಿಫಾರ್ಸಿನಲ್ಲಿ ಈ ರೀತಿಯಾದಂಥ ಸಂಬಂಧ ಏರ್ಪಡಿಸಬೇಕೆಂಬ ಉದ್ದೇಶದಿಂದ ಪ್ರತಿವರ್ಷವೂ ಎಲ್ಲಾ ವಿಲೇಜ್ ಪಂಚಾಯತಿಗಳ ಸಭೆಯನ್ನು ಎರಡು ಸಲ ತಾಲ್ಲೂಕ್ ಬೋರ್ಡಿನವರು ಕರೆಯಬೇಕು ಮತ್ತು ಅವರ ಸಮಸ್ಯೆಗಳನ್ನು ಪರಸ್ಪರ ವಿಚಾರ ವಿನಿಮಯ ಮಾಡಬೇಕು, ಚರ್ಚೆ ಮಾಡಬೇಕು ಎಂಬುದಾಗಿ ಶಿಫಾರ್ಸು ಮಾಡಿದ್ದಾರೆ. ಆಮೇಲೆ ಬಹಳ ಚರ್ಚೆಗೊಳಗಾಗಿದ್ದಂಥ ಒಂದು ವಿಚಾರವೇನೆಂದರೆ, ಶಾಸನ ಸಭಾ ಸದಸ್ಯರು ಈ ತಾಲ್ಲೂಕ್‌ಬೋರ್ಡ್ ಮತ್ತು ಜಿಲ್ಲಾ ಸಮಿತಿಯ ಸದಸ್ಯರಾಗಿರ ಬೇಕೋ ಬೇಡವೋ ಎಂಬುದು. ಸದಸ್ಯರಾದರೂ ಕೂಡ ಪೂರ್ಣ ಸದಸ್ಯರಾಗಬೇಕೋ ಅಥವಾ

ಸಹಸದಸ್ಯರು ಆಗಿರಬೇಕೋ ಎಂಬುದಾಗಿ ಹೇಳತಕ್ಕ ಪ್ರಶ್ನೆ ಕೂಡ ಸಂಯುಕ್ತ ಸೆಲೆಕ್ಟ್ ಕಮಿಟಿಯವರು ಬಿಡಿಸಿದ್ದಾರೆ. ಈ ಶಿಫಾರಸಿನ ಮೇರೆಗೆ ಈ ಎರಡು ಮಟ್ಟದಲ್ಲಿಯೂ ಶಾಸನ ಸಭಾ ಸದಸ್ಯರು ಇರುವುದರಿಂದ ತಮ್ಮ ಸ್ಥಾನಬಲದಿಂದ ಸದಸ್ಯರು ಆಗಿರಬೇಕು ಅಂದರೆ ಎಕ್ಸ್-ಅಫಿಷಿಯೋ ಮೆಂಬರಾಗಿರಬೇಕೆಂದು ಸಮಿತಿಯವರು ಶಿಫಾರ್ಸು ಮಾಡಿದ್ದಾರೆ.

ಇನ್ನು ತಾಲ್ಲೂಕ್ ಬೋರ್ಡ್ ಚುನಾವಣಾ ಕ್ಷೇತ್ರದ ವಿಚಾರದಲ್ಲಿಯೂ ಮೂಲ ಮಸೂದೆಯಲ್ಲಿದ್ದಂತಹ ಪ್ರಾವಿಷನ್‌ಗಳನ್ನು ಸ್ವಲ್ಪಮಟ್ಟಿಗೆ ಬದಲಾವಣೆಗಳನ್ನು ಈ ಸಮಿತಿಯವರು ಮಾಡಿದ್ದಾರೆ. ಈಗಿನ ಶಿಫಾರಸಿನಿಂದ ಯಾವ ತಾಲ್ಲೂಕ್‌ನಲ್ಲಿ 25 ಸಾವಿರಕ್ಕಿಂತ ಹೆಚ್ಚು ಮತ್ತು 50 ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುತ್ತದೋ ಆ ತಾಲ್ಲೂಕಿಗೆ ಕನಿಷ್ಟಪಕ್ಷ ಒಂದು ಸ್ಥಾನ ಜಿಲ್ಲಾ ಪರಿಷತ್ತಿನಲ್ಲಿ ಸಿಗಬೇಕು ಮತ್ತು ಆಯಾ ತಾಲ್ಲೂಕಿನ ಜನಸಂಖ್ಯೆ ಪ್ರಮಾಣದ ಮೇರೆಗೆ ಜಿಲ್ಲಾ ಪರಿಷತ್ತಿಗೆ ಬೇರೆ ಬೇರೆ ಪ್ರದೇಶಗಳಿಂದ ಪ್ರತಿನಿಧಿಗಳನ್ನು ಆರಿಸತಕ್ಕ ಒಂದು ಪ್ರಮಾಣವನ್ನು ಈ ಸಮಿತಿಯವರು ಗೊತ್ತುಪಡಿಸಿದ್ದಾರೆ.

ಕೊನೆಯದಾಗಿ ಮತ್ತೊಂದು ಬಹಳ ಮಹತ್ವವಾದ ಅಂಶವೆಂದರೆ, ನ್ಯಾಯಪಂಚಾಯತಿಗಳಿಗೆ ಸಂಬಂಧಪಟ್ಟುದು. ಈ ನ್ಯಾಯಪಂಚಾಯತಿಗಳ ರಚನೆ ಮೂಲ ಮಸೂದೆಯಲ್ಲಿಯೂ ಕೂಡ ಕಡ್ಡಾಯವಾಗಿ ಎಲ್ಲಾ ಪ್ರದೇಶಗಳಲ್ಲಿಯೂ ಆಗಬೇಕೆಂದು ಇರಲಿಲ್ಲ. ಈ ನ್ಯಾಯ ಪಂಚಾಯಿತಿಗಳನ್ನು ರಚನೆ ಮಾಡುವುದರ ವಿಚಾರದಲ್ಲಿ ಕೂಲಂಕಷವಾಗಿ ಚರ್ಚೆ ಮಾಡಿ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಮತ್ತೊಂದು ಷರತ್ತನ್ನು ಹಾಕಿ ನ್ಯಾಯಪಂಚಾಯತಿಗಳ ರಚನೆಯಾಗಬಹುದು ಎಂದು ಶಿಫಾರ್ಸು ಮಾಡಿದ್ದಾರೆ. ಆ ಷರತ್ತು ಏನೆಂದರೆ, ಯಾವ ಪಂಚಾಯತಿಗಳ ಕ್ಷೇತ್ರದಲ್ಲಿ ನ್ಯಾಯಪಂಚಾಯತಿಯಾಗಬೇಕೆಂದು ಇಚ್ಛೆಯೋ ಅಲ್ಲಿ ಸಂಬಂಧಪಟ್ಟಂಥ ಎಲ್ಲಾ ಪಂಚಾಯತಿಗಳು ಒಮ್ಮತದಿಂದ ತಮ್ಮ ಕ್ಷೇತ್ರದಲ್ಲಿ ನ್ಯಾಯಪಂಚಾಯತಿಗಳು ಆಗಬೇಕು ಎಂಬುದಾಗಿ ತೀರ್ಮಾನ ಮಾಡಿದರೆ ಅಂತರೇ ಸರ್ಕಾರದವರು ನ್ಯಾಯಪಂಚಾಯತಿಗಳನ್ನು ಏರ್ಪಡಿಸಬಹುದು. ಅಲ್ಲದೆ ಆ ಕ್ಷೇತ್ರದಲ್ಲಿ ಯಾವುದೇ ಒಂದು ಪಂಚಾಯತಿಯು ಅದಕ್ಕೆ ಒಪ್ಪದೇ ಇದ್ದರೆ ಅಥವಾ ಯಾವುದೇ ಪಂಚಾಯತಿಯಲ್ಲಿ ಇದಕ್ಕೆ ಒಮ್ಮತವಿಲ್ಲದೇ ಹೋದರೆ ಬಹುಮತವಿಲ್ಲದೇ ಹೋಗಿದ್ದರೆ ಅಂತಹ ಕಡೆಗಳಲ್ಲಿ ನ್ಯಾಯಪಂಚಾಯತಿಯನ್ನು ಏರ್ಪಡಿಸುವುದು ಸರಿಯಲ್ಲವೆಂದು ಈ ಸಮಿತಿಯವರು ಶಿಫಾರ್ಸು ಮಾಡಿದ್ದಾರೆ. ಒಂದು ಸಾರಿ ನ್ಯಾಯಪಂಚಾಯಿತಿ ಸ್ಥಾಪನೆಯಾದಮೇಲೆ ಸಂಬಂಧಪಟ್ಟ ಪಂಚಾಯಿತಿಗಳಲ್ಲಿ ನ್ಯಾಯ ಪಂಚಾಯಿತಿ ಸರಿಯಾಗಿ ನಡೆಯುತ್ತಾ ಇಲ್ಲ ಅದನ್ನು ಡಿಸಾಲ್ವ್ ಮಾಡಬೇಕು ಎಂಬುದಾಗಿ ಬಂದರೂ ಕೂಡ ಅದರಂತೆ ಸರ್ಕಾರದವರು ಅದನ್ನು ಡಿಸಾಲ್ವ್ ಮಾಡಬೇಕೆಂದೂ ಕೂಡ ಶಿಫಾರ್ಸು ಮಾಡಲ್ಪಟ್ಟಿದೆ. ಆದ್ದರಿಂದ ಈ ಸಭೆಯ ಕೆಲವು ಮಾನ್ಯ ಸದಸ್ಯರಿಗೆ ಈ ವಿಚಾರದಲ್ಲಿ ಏನೆಂದು ಶಂಕೆ ಇತ್ತೋ ಆ ಶಂಕೆಯನ್ನು ಸಂಪೂರ್ಣವಾಗಿ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಇಂತಹ ಒಂದು ಷರತ್ತನ್ನು ಹಾಕಿ ನಿವಾರಿಸಿದ್ದಾರೆ. ಈಗ ನಾನು ಕೇವಲ ಮುಖ್ಯ ಮುಖ್ಯವಾದಂಥ ಕೆಲವು ಅಂಶಗಳ ವಿಚಾರದಲ್ಲಿ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಮಾಡಿದಂಥ ಶಿಫಾರ್ಸುಗಳ ಬಗ್ಗೆ ಹೇಳಿದ್ದೇನೆ. ಜಾಯಿಂಟ್ ಸೆಲೆಕ್ಟ್ ಕಮಿಟಿ ವರದಿ ಮಾನ್ಯ ಸದಸ್ಯರಿಗೆ ಕೈಸೇರಿ ಈಗಾಗಲೇ ಅನೇಕ ದಿನಗಳಾದುವು. ಮಾನ್ಯ ಸದಸ್ಯರೆಲ್ಲರೂ ಈಗಾಗಲೇ ಆ ವರದಿಯನ್ನು ಸ್ಟಡಿ ಮಾಡಿರಬೇಕು ಎಂಬುದಾಗಿ ನಾನು ನಂಬಿದ್ದೇನೆ. ಈ ವರದಿಯನ್ನು ಬಹಳ ದೀರ್ಘವಾಗಿ, ಆಳವಾಗಿ, ವಿಚಾರ ವಿನಿಮಯ ಮಾಡಿ ಚರ್ಚೆಮಾಡಿ ಸೆಲೆಕ್ಟ್ ಕಮಿಟಿಯವರು ಇದರಲ್ಲಿ ಮಾಡಿರತಕ್ಕಂಥ ಶಿಫಾರ್ಸುಗಳೆಲ್ಲವೂ ಮಾನ್ಯ ಸದಸ್ಯರೆಲ್ಲರ ಒಪ್ಪಿಗೆಗೆ ಪಾತ್ರವಾಗುತ್ತವೆಯೆಂದು ನಾನು ನಂಬಿದ್ದೇನೆ. ಆದ್ದರಿಂದ ಈ ವರದಿಯನ್ನು ಎಲ್ಲರೂ ಒಮ್ಮತದಿಂದ ಸ್ವೀಕಾರ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಪಿ. ಅಪ್ಪಣ್ಣ (ವೀರಾಜಪೇಟೆ).—ಮಾನ್ಯ ಸಭಾಧ್ಯಕ್ಷರೇ, ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಮಂಡಿಸಿದಂಥ ಮೈಸೂರು ಗ್ರಾಮಪಂಚಾಯತಿಗಳ ಮಸೂದೆಯಮೇಲಿನ ವರದಿಯನ್ನು ನಾನು ಸ್ವಾಗತಿಸುತ್ತಾ ಅದರಲ್ಲಿ ಅವರು ಮಾಡಿರತಕ್ಕ ಕೆಲವು ಬದಲಾವಣೆಗಳನ್ನು ಈ ಸಭೆಯಲ್ಲಿ ಎತ್ತಿ ಮಾತನಾಡಬೇಕೆಂದು ನಾನು ಇಚ್ಛೆಪಟ್ಟಿದ್ದೇನೆ. ಮಾನ್ಯ ಮಂತ್ರಿಗಳು ಮೊದಲನೆಯದಾಗಿ ಈ ಮಸೂದೆಯನ್ನು ಈ ಮನೆಯಲ್ಲಿ ತರುವಂತಹ ಸಂದರ್ಭದಲ್ಲಿ ಯಾವ ಒಂದು ಉದ್ದೇಶವನ್ನು ಇಟ್ಟಿದ್ದರೋ ಆ ಉದ್ದೇಶದ ಸ್ವಲ್ಪಭಾಗವೂ ಇದರಲ್ಲಿ ಫಲಕಾರಿಯಾಗಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಈಗ ತಂದಿರುವ ಮಸೂದೆ ನಮ್ಮ ದೇಶದಲ್ಲಿರುವಂತಹ ಅಡಳಿತ ಪೂರ್ತಿ ವಿಕೇಂದ್ರೀಕರಣವಾಗಬೇಕು, ಹಾಗೂ ಆಯಾಕ್ಷೇತ್ರದಲ್ಲಿರತಕ್ಕ ಜನರು ಪೂರ್ಣಅಧಿಕಾರವನ್ನು ಈ ವಿಚಾರದಲ್ಲಿ ವಹಿಸಬೇಕೆಂಬ ಭಾವನೆಯಿಂದ ಕೂಡಿದ್ದಾಗಿದೆ. ಅಂತಹ ಸಂದರ್ಭದಲ್ಲಿ ಜಿಲ್ಲಾಪರಿಷತ್ ಮತ್ತು ತಾಲ್ಲೂಕ್ ಬೋರ್ಡುಗಳಲ್ಲಿ ಪುನಃ ಶಾಸನ ಸಭಾಸದಸ್ಯರು ಕೂತು ತಮ್ಮ ಮತವನ್ನು ಜಿರಾಯಿಸಿ ಈ ವಿಕೇಂದ್ರೀಕರಣಕ್ಕೆ ಎಷ್ಟರಮಟ್ಟಿಗೆ ಪ್ರೋತ್ಸಾಹ ಕೊಟ್ಟಿದ್ದಾರೆಂದು ಹೇಳಿದರೆ

(ಶ್ರೀ ಎ. ಶಿ. ಅಶ್ವತ್ಥ್).

ಅದನ್ನು ಈಗ ಸ್ವಲ್ಪಮಟ್ಟಿಗೆ ಆಲೋಚನೆ ಮಾಡುವಂಥ ವಿಚಾರವೆಂಬುದಾಗಿ ನಾನು ಹೇಳಬಯಸುತ್ತೇನೆ. ನಿಜವಾಗಿಯೂ ಅಲ್ಲಿನ ಜನತೆ ಅಲ್ಲಿನ ಆಡಳಿತವನ್ನು ಮತ್ತು ಅಲ್ಲಿನ ಕಾರ್ಯಕ್ರಮಗಳನ್ನು ಅವರೇ ಮಾಡಬೇಕೆಂಬ ವಿಚಾರವನ್ನು ಪಡೆದವರಾಗಿರಬೇಕು. ಇಂಥಾದ್ದರಲ್ಲಿ ಅವರ ಒಂದು ಅಧಿಕಾರದಲ್ಲಿ ನಮಗೆ ಒಂದು ಅಧಿಕಾರ ಸಿಗಬೇಕೆಂಬ ಭಾವನೆಯನ್ನು ಈ ಸಮಿತಿಯವರು ಅಭಿಪ್ರಾಯ ಪಟ್ಟಿರುತ್ತಾರೆ. ಇವರು ಏನೊಂದು ವಿಕೇಂದ್ರೀಕರಣವನ್ನು ಆಡಳಿತದಲ್ಲಿ ಮಾಡಬೇಕೆಂದಿದ್ದಾರೋ ಆ ವಿಕೇಂದ್ರೀಕರಣ ಇದರಲ್ಲಿ ಆಗುವುದಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ನಿಜವಾಗಿಯೂ ಈ ರಾಜ್ಯದ ಸಿಟಿಗಳಲ್ಲಿರತಕ್ಕ ಕಾನೂನಿನ ಕೆಲವು ಭಾಗವನ್ನು ಹಳ್ಳಿಯ ಜನತೆ ನಡೆಸಿಕೊಂಡು ಬರುವಂತಹ ಅಭಿಪ್ರಾಯಪಟ್ಟಮೇರೆಗೆ ನಾವು ಈಗ ಜಿಲ್ಲಾ ಪರಿಷತ್ತಿನಲ್ಲೂ ಮತ್ತು ತಾಲ್ಲೂಕು ಬೋರ್ಡಿನಲ್ಲೂ ಪುನಃ ಮತದಾನವನ್ನು ಕೊಡುವ ಹಕ್ಕನ್ನು ಇಟ್ಟುಕೊಂಡಿದ್ದೇ ಆದರೆ ನಾವು ಯಾವ ವಿಕೇಂದ್ರೀಕರಣವನ್ನು ಆಡಳಿತದಲ್ಲಿ ಬೆಳೆಸಿಕೊಂಡು ಬಂದಿದ್ದೇವೋ ಅದನ್ನು ನಿಜವಾಗಿ ಕಟ್ಟಿದ್ದೇವೆಯೇ ಎಂಬ ಪ್ರಶ್ನೆ ನಮಗೆ ಎತ್ತಿ ಮೂಡುತ್ತಿದೆ.

ನಿಜವಾಗಿಯೂ ಈ ವಿಚಾರದಲ್ಲಿ ನಮ್ಮಲ್ಲಿ ಏನೊಂದು ಭಾವನೆ ಬಂದಿದೆ ಎಂದರೆ, ಶಾಸನ ಸಭಾಸದಸ್ಯರಾಗಿ ಇಲ್ಲಿಗೆ ಬಂದು ಕುಳಿತುಕೊಂಡಿರುವಂತಹ ನಮಗೆ ನಮ್ಮ ಮಕ್ಕಳು, ಮೊಮ್ಮಕ್ಕಳು ಸದಸ್ಯರಾಗಿ ಬಂದು ಇಲ್ಲಿ ಕುಳಿತುಕೊಳ್ಳುತ್ತಾರೆ, ನಮ್ಮಲ್ಲಿ ಇರುವಂತಹ ಈ ಅಧಿಕಾರ ಒಂದು ಪರಂಪರೆಯಾಗಿ ನಮ್ಮ ಮನೆತನದವರಿಗೆ ಸೇರಿದ ಅಧಿಕಾರ, ಇದು ಎಲ್ಲಿ ಹೋಗುತ್ತದೆಯೋ ಎಂಬ ಸಂಶಯ ನಮ್ಮಲ್ಲಿ ಕೆಲವರಿಗೆ ಬಂದಿದೆ ಎಂದು ಕಾಣುತ್ತದೆ. ನಿಜವಾಗಿಯೂ ಯಾವ ಒಂದು ಅಧಿಕಾರ ವಿಕೇಂದ್ರೀಕರಣ ಆಗುತ್ತದೆ ಎಂದು ನಾವು ತಿಳಿದುಕೊಂಡಿದ್ದೆವೋ ಆ ವಿಕೇಂದ್ರೀಕರಣ ಆಗುವುದಿಲ್ಲ. ಪುನಃ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕುಮಟ್ಟದಲ್ಲಿ ನಾವು ನಮ್ಮ ಅಧಿಕಾರವನ್ನು ನಮ್ಮ ಒಂದು ದರ್ಪವನ್ನು ಆಡಳಿತದಲ್ಲಿ ತೋರಿಸಿದರೆ ಈಗ ಅಧಿಕಾರ ವಿಕೇಂದ್ರೀಕರಣವಾದಂತಾಗುವುದಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಈ ದೃಷ್ಟಿಯಿಂದ ನಾವು ಈ ವಿಚಾರದಲ್ಲಿ ಸ್ವಲ್ಪ ಆಲೋಚನೆ ಮಾಡುವುದು ಉಚಿತ. ಏತಕ್ಕೆಂದರೆ, ನಿಜವಾಗಿಯೂ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರವನ್ನು ಕೊಡುವಂತಹ ಸಂದರ್ಭದಲ್ಲಿ ವಿಚ್ಛಮನಸ್ಸಿನಿಂದ ಕೊಡುವುದು ಉಚಿತವಾಗಿದೆ. ಈ ದೃಷ್ಟಿಯಿಂದ ನಾವು ನಿಜವಾಗಿಯೂ ಯಾವ ಒಂದು ಆಶೆಯನ್ನು ಇಟ್ಟುಕೊಂಡಿದ್ದೆವೋ ಆ ಆಶೆ ಇವೊತ್ತು ಈಡೇರುತ್ತದೆಯೇ ಎಂಬ ಪ್ರಶ್ನೆ ನಮ್ಮಲ್ಲಿ ಮೂಡಿಬಂದಿದೆ.

ಇನ್ನು ಎರಡನೆಯದಾಗಿ, ಈ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಡುವಂತಹ ಸಂದರ್ಭದಲ್ಲಿ ಈಗ ರಾಜ್ಯ ಸರ್ಕಾರದ ಆಡಳಿತಕ್ಕೆ ಒಳಪಟ್ಟಿರುವಂತಹ ಅನೇಕ ಕಾರ್ಯಕಲಾಪಗಳನ್ನು ಜಿಲ್ಲಾಪರಿಷತ್ತಿಗೂ ಮತ್ತು ತಾಲ್ಲೂಕು ಬೋರ್ಡಿಗೂ ಈಗ ಸರ್ಕಾರದವರು ಕೊಡುತ್ತಿದ್ದಾರೆ. ಈ ರೀತಿ ಅವುಗಳಿಗೆ ಕೆಲವು ಕಾರ್ಯಕಲಾಪಗಳನ್ನು ವಹಿಸುವಾಗ ಅವುಗಳಿಗೆ ಸರ್ಕಾರದವರು ಕೊಡುವ ಹಣಸಹಾಯ ಇತ್ಯಾದಿ ಕೆಲವು ವಿಚಾರಗಳನ್ನು ಇವೊತ್ತು ಮಾನ್ಯ ಮಂತ್ರಿಗಳು ಹೇಳಿದರು. ಯಾವ ಯಾವ ಇಲಾಖೆಗಳು ಎಷ್ಟೆಷ್ಟು ಕಾರ್ಯಕಲಾಪಗಳನ್ನು ನಡೆಸುತ್ತಿವೆಯೋ ಅವುಗಳೆಲ್ಲವನ್ನೂ ಜಿಲ್ಲಾ ಪರಿಷತ್ತಿಗೂ ಮತ್ತು ತಾಲ್ಲೂಕು ಬೋರ್ಡಿಗೂ ವಹಿಸುತ್ತಾರೆಯೋ ಹಾಗೆ ಸರ್ಕಾರದವರು ಆ ಕಾರ್ಯಕಲಾಪಗಳಿಗೆ ಖರ್ಚುಮಾಡುತ್ತಿದ್ದಂತಹ ಹಣವನ್ನು ಸಹ ಆ ಸಂಸ್ಥೆಗಳಿಗೆ ವಹಿಸುವುದಕ್ಕೆ ತಯಾರಾಗಿದೆಯೇ? ಇಲ್ಲಿಯವರೆಗೂ ನಮ್ಮ ಅನುಭವಕ್ಕೆ ಬಂದಿರುವ ಕೆಲವು ವಿಷಯಗಳನ್ನು ಹೇಳುವುದಾದರೆ, ಈಗ ತಾಲ್ಲೂಕು ಬೋರ್ಡುಗಳಿಗೆ ಕೆಲವು ಸ್ಕೂಲುಗಳ ಮೆಂಟಿನೆನ್ಸ್ ಅನ್ನು ವಹಿಸಿದ್ದಾರೆ. ಸಾಧಾರಣವಾಗಿ ಶಾಲಾ ಕಟ್ಟಡಗಳನ್ನು ನೋಡಿಕೊಳ್ಳುವುದು ಮತ್ತು ರಿಪೇರಿ ಮಾಡುವಂತಹ ಜವಾಬ್ದಾರಿ ಪಬ್ಲಿಕ್ ವರ್ಕ್ಸ್ ಇಲಾಖೆಯವರ ಕೈಯ್ಯಲ್ಲಿತ್ತು. ಈಗಿರುವ ಕಾನೂನು ಪ್ರಕಾರ ಆ ಜವಾಬ್ದಾರಿಯನ್ನು ತಾಲ್ಲೂಕು ಬೋರ್ಡಿಗೆ ಕೊಟ್ಟಿದ್ದಾರೆ. ಆದರೆ ಸರ್ಕಾರದವರು ಪಬ್ಲಿಕ್ ವರ್ಕ್ಸ್ ಇಲಾಖೆಯ ಮುಖಾಂತರ ಶಾಲೆಗಳ ರಿಪೇರಿಗೆ ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದರೋ ಅಷ್ಟು ಹಣವನ್ನು ಇಲ್ಲಿಯವರೆಗೂ ತಾಲ್ಲೂಕು ಬೋರ್ಡುಗಳಿಗೆ ಸರ್ಕಾರದವರು ಕೊಟ್ಟಿಲ್ಲ. ಒಂದು ನಿದರ್ಶನವನ್ನು ನಾನು ಈ ಮಾನ್ಯ ಸಭೆಯ ಗಮನಕ್ಕೆ ತರುವುದಾದರೆ, ಕೊಡಗು ಜಿಲ್ಲೆಯಲ್ಲಿ ಒಂದು ತಾಲ್ಲೂಕಿನಲ್ಲಿ ಶಾಲೆಗಳ ರಿಪೇರಿಯನ್ನು ಮಾಡುವುದಕ್ಕೆ 8 ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ. ಒಂದು ತಾಲ್ಲೂಕಿನಲ್ಲಿ 147 ಶಾಲೆಗಳಿವೆ. ಈ 147 ಶಾಲೆಗಳಿಗೂ ಈ ಹಣವನ್ನು ಹಂಚುವುದಾದರೆ ಒಂದೊಂದು ಶಾಲೆಗೆ ಎಷ್ಟೆಷ್ಟು ಹಣ ಬರುತ್ತದೆ ಆ ಹಣದಿಂದ ಶಾಲೆಯನ್ನು ರಿಪೇರಿ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಈ ರೀತಿ 147 ಶಾಲೆಗಳನ್ನು ರಿಪೇರಿ ಮಾಡುವುದಕ್ಕೆ ಸರ್ಕಾರದವರು ಪಬ್ಲಿಕ್ ವರ್ಕ್ಸ್ ಇಲಾಖೆಯ ಮುಖಾಂತರ ಎಷ್ಟು ಹಣವನ್ನು ಖರ್ಚುಮಾಡುತ್ತಿದ್ದರೋ ಅಷ್ಟು ಹಣವನ್ನು ಸರ್ಕಾರದವರು ತಾಲ್ಲೂಕು

ಬೋರ್ಡಿಗೆ ಒಪ್ಪಿಸಿದ್ದಾರೆಯೇ ಎಂಬ ಪ್ರಶ್ನೆಯನ್ನು ಸರ್ಕಾರದ ಮುಂದೆ ನಾವು ಇಡಬೇಕಾಗಿದೆ. ಇದೇ ರೀತಿ ಸರ್ಕಾರದವರು ತಮ್ಮ ಆಡಳಿತಕ್ಕೆ ಒಳಪಟ್ಟಿರುವಂತಹ ಕಾರ್ಯಕಲಾಪಗಳು ಮತ್ತು ಹಣವನ್ನು ತಾಲ್ಲೂಕು ಬೋರ್ಡಿಗೆ ವರ್ಗಾವಣೆ ಮಾಡುವುದಾದರೆ ಅದು ಅಧಿಕಾರವನ್ನು ವಿಕೇಂದ್ರೀಕರಣ ಮಾಡಿದಂತಾಗುವುದಿಲ್ಲ. ಈ ದೃಷ್ಟಿಯಿಂದ ಸರ್ಕಾರದವರು ಅಧಿಕಾರವನ್ನು ವಿಕೇಂದ್ರೀಕರಣ ಮಾಡುವಂತಹ ಸಂದರ್ಭದಲ್ಲಿ ಈಗ ಯಾವ ಯಾವ ಕಾರ್ಯಕಲಾಪಗಳನ್ನು ತಾಲ್ಲೂಕು ಬೋರ್ಡು ಮತ್ತು ಜಿಲ್ಲಾ ಪರಿಷತ್ತಿಗೆ ವಹಿಸುತ್ತಾರೆಯೋ ಆಯಾ ಕಾರ್ಯಕಲಾಪಗಳಿಗೆ ಸರ್ಕಾರದವರು ಎಷ್ಟೆಷ್ಟು ಹಣವನ್ನು ಖರ್ಚುಮಾಡುತ್ತಿದ್ದರೋ ಅಷ್ಟಷ್ಟು ಹಣವನ್ನೂ ಕೂಡ ಜಿಲ್ಲಾ ಪರಿಷತ್ತು ಮತ್ತು ತಾಲ್ಲೂಕು ಬೋರ್ಡಿಗೆ ಒಪ್ಪಿಸದೇಹೋದರೆ ಅದರಿಂದ ಏನೂ ಪ್ರಯೋಜನ ಆಗುವುದಿಲ್ಲ ಎಂಬ ವಿಚಾರವನ್ನು ನಾನು ಹೇಳಲಚ್ಚಿಸುತ್ತೇನೆ.

ಮತ್ತು ಇನ್ನೊಂದು ಮುಖ್ಯ ವಿಷಯವೇನೆಂದರೆ, ಈ ರೀತಿ ಅಧಿಕಾರವನ್ನು ವಿಕೇಂದ್ರೀಕರಣ ಮಾಡುವಂತಹ ಸಂದರ್ಭದಲ್ಲಿ ಈ ಮಸೂದೆಯಲ್ಲಿ ಹೇಳಿರುವ ಒಂದು ವಿಷಯವನ್ನು ನಾವು ಸ್ವಾಗತ ಮಾಡಬೇಕಾಗಿದೆ. ಅದು ಏನೆಂದರೆ, ನ್ಯಾಯಪಂಚಾಯಿತಿಯ ವಿಷಯ. ಈ ನ್ಯಾಯ ಪಂಚಾಯಿತಿಯನ್ನು ದೇಶಾದ್ಯಂತ ಒಂದೇ ಸಲ ಜಾರಿಗೆ ತರದೆ ಆಯಾ ಗ್ರಾಮಪಂಚಾಯಿತಿಯವರು ಇಷ್ಟಪಟ್ಟರೆ ಅದನ್ನು ಜಾರಿಗೆ ತರಬಹುದು ಎಂಬ ವಿಚಾರವನ್ನು ಜಾಯಿಂಟ್ ಸೆಲೆಕ್ಟ್ ಸಮಿತಿಯವರು ಆಲೋಚನೆ ಮಾಡಿದ್ದು ನಿಜವಾಗಿಯೂ ಉಚಿತವಾಗಿದೆ. ಕೆಲವು ಭಾಗಗಳಲ್ಲಿ ನ್ಯಾಯವನ್ನು ಕೊಡುವ ಅರ್ಹತೆಯುಳ್ಳ ಕೆಲವು ಗ್ರಾಮಪಂಚಾಯಿತಿಗಳಲ್ಲಿ ಅದನ್ನು ಆಚರಣೆಗೆ ತಂದು ಅಲ್ಲಿ ಅದು ವ್ಯವಹಾರಿಕವಾಗಿ ಸರಿಯಾಗಿ ನಡೆಯುತ್ತದೆಯೇ ಹೇಗೆ ಎಂಬ ಉದಾಹರಣೆಯನ್ನು ನೋಡಿ ಅನಂತರ ಇಡೀ ರಾಜ್ಯದಲ್ಲೆಲ್ಲಾ ಅದನ್ನ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬಹುದು. ಒಟ್ಟಿನಲ್ಲಿ ನಮ್ಮ ರಾಜ್ಯದಲ್ಲಿ ಕೆಲವು ಭಾಗಗಳಲ್ಲಿ ನ್ಯಾಯಪಂಚಾಯಿತಿಯನ್ನು ಉದಾಹರಣಾರ್ಥವಾಗಿ ಜಾರಿಗೆ ತಂದು ಅದರಿಂದ ಏನು ಪ್ರಯೋಜನವಾಗುತ್ತದೆ ಎಂಬ ಆಲೋಚನೆಯನ್ನು ಮಾಡಿ ಅನಂತರ ಅದನ್ನು ದೇಶಾದ್ಯಂತ ಜಾರಿಗೆ ತರುವಂತೆ ಮಾಡುವುದು ಉಚಿತ ಮತ್ತು ಸ್ವಾಗತಾರ್ಹ ಎಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ. ಈ ಮಸೂದೆಯಲ್ಲಿ ಸೂಚಿಸಿರುವ ಸೆಸ್ಸು ಮತ್ತು ಏಕರೂಪದ ಭೂಕಂದಾಯ ಇವೆಲ್ಲವೂ ಸೇರಿದರೆ 100ಕ್ಕೆ 40ರಷ್ಟು ತೆರಿಗೆ ರೈತನಮೇಲೆ ಬೀಳುತ್ತದೆ. ಈ ಸೆಸ್ಸನ್ನು ಹಾಕುವ ವಿಚಾರದಲ್ಲಿ ರೈತನಿಗೆ ಎಷ್ಟರ ಮಟ್ಟಿನ ಒಂದು ಧಕ್ಕೆ ಬರುತ್ತದೆ ಎಂಬುದನ್ನೂ ಸಹ ಸರ್ಕಾರದವರ ಸ್ವಲ್ಪ ಆಲೋಚನೆ ಮಾಡುವುದು ಉಚಿತ. ಈಗಾಗಲೇ ಭೂಕಂದಾಯದ ಏರಿಕೆಯು ಒಂದು ನಿಯಮಾವಳಿ ನಮ್ಮ ಮುಂದೆ ಇದೆ. ಇವೊತ್ತು ಒಬ್ಬ ರೈತ 10 ರೂಪಾಯಿಗಳ ಕಂದಾಯವನ್ನು ಕೊಡುತ್ತಿದ್ದರೆ ಅದು 20 ರೂಪಾಯಿಗಳಾಗುತ್ತವೆ. ಆದ್ದರಿಂದ ಇವೊತ್ತು 10 ರೂಪಾಯಿ ಕಂದಾಯ 5 ರೂಪಾಯಿ ಸೆಸ್ಸನ್ನು ಕೊಡುತ್ತಿದ್ದರೆ ಅದು 30 ರೂಪಾಯಿಗಳಾಗುತ್ತದೆ. ಅಂತೂ ಒಟ್ಟಿನಲ್ಲಿ ಈ ಮಸೂದೆಯಲ್ಲಿ ಸೂಚಿಸಿರುವ ಸೆಸ್ಸು ಮತ್ತು ಏಕರೂಪದ ಭೂಕಂದಾಯ ಇವೆಲ್ಲವೂ ಸೇರಿದರೆ 100ಕ್ಕೆ 40 ರಷ್ಟು ತೆರಿಗೆಯನ್ನು ರೈತ ಕೊಡಬೇಕಾಗುತ್ತದೆ. ಇದರಿಂದ ಇವೊತ್ತು ಇರುವಂತಹ ಕಂದಾಯದ ಎರಡು ಪಾಲು ಮೂರು ಪಾಲಿಗಿಂತ ಜಾಸ್ತಿಯಾಗುತ್ತದೆ. ನಿಜವಾಗಿಯೂ ಇದೆಲ್ಲವನ್ನೂ ತೆಗೆದುಕೊಂಡು ಲೆಕ್ಕ ಹಾಕಿ ನೋಡುವುದಾದರೆ 10 ರೂಪಾಯಿ ಇರುವಂತಹ ಕಂದಾಯ 40 ರೂಪಾಯಿಗಳಾಗುತ್ತದೆ. ಅದು ಅಷ್ಟರಮಟ್ಟಿಗೆ ಒಂದು ಏರಿಕೆಯಾಗಿದೆ. ಇವತ್ತು ನಮ್ಮ ದೇಶದಲ್ಲಿ ನಿಜವಾಗಿಯೂ ಆಹಾರ ಸಾಮಗ್ರಿ ಉತ್ಪಾದನೆ ಜಾಸ್ತಿಯಾಗಬೇಕು, ರೈತರಿಗೆ ಪರಿಹಾರ ಕೊಡಬೇಕು, ನಮ್ಮ ದೇಶದಲ್ಲಿ ಆಹಾರವನ್ನು ಜಾಸ್ತಿ ಬೆಳೆಸಬೇಕು ಎಂಬಂಥ ಒಂದು ಮನೋಭಾವವನ್ನು ಹೊಂದಿರುವ ನಾವು, ಒಂದಕ್ಕೆ ನಾಲ್ಕರವರೆಗೆ ಆಗುವ ತೆರಿಗೆ ಏರಿಕೆಯಿಂದ ನಿಜವಾಗಿ ಆಹಾರ ಸಾಮಗ್ರಿಗಳನ್ನು ಹೆಚ್ಚಾಗಿ ಬೆಳೆಯುವುದಕ್ಕೆ ಇದು ಉತ್ತೇಜನ ಕೊಟ್ಟಂತಾಗುತ್ತದೆಯೇ ಎಂಬ ಪ್ರಶ್ನೆ ನಮ್ಮ ಮುಂದೆ ಮೂಡಿದೆ. ಆದ್ದರಿಂದ ಈ ಸೆಸ್ ಏರಿಕೆಯಿಂದ ರೈತನಿಗೆ ದೊಡ್ಡ ಧಕ್ಕೆ ಬಂದೇ ಬರುತ್ತದೆ. ಅದನ್ನು ನಾವು ಆಲೋಚನೆ ಮಾಡಬೇಕಾದ್ದು ಉಚಿತ.

ಈ ಜಾಯಿಂಟ್ ಸೆಲೆಕ್ಟ್ ಕಮಿಟಿಯ ವರದಿ ಮೇಲೆ ಇಷ್ಟು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ, ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—Who are the other members willing to participate ?

ಶ್ರೀ ಎಸ್. ಗೋಪಾಲ ಗೌಡ.—ಇದನ್ನು ಮುಂದಿನ ದಿವಸ ತೆಗೆದುಕೊಳ್ಳಬೇಕು. ಇವತ್ತು ಈ ಮನೂದೆ ಇದೆಯೆಂದು ಗೊತ್ತಾಗಲಿಲ್ಲ. ಇವತ್ತು ಖಾನಗಿ ನಿರ್ಣಯವೊಂದಿತ್ತು. ಮೂರು ಮತ್ತು ಮಾರನೆ ದಿನಗಳಲ್ಲಿ ಬಜೆಟ್ ಪ್ರೆಸೆಂಟೇಶನ್ ಮತ್ತು ಡಿಸ್ಕಷನ್ ಎಂದು ಪ್ರೋಗ್ರಾಂನಲ್ಲಿದೆ. ಆದ್ದರಿಂದ ಪಂಚಾಯತಿ ರಾಜ್ಯ ಮನೂದೆಯನ್ನು ಯಾವತ್ತು ತೆಗೆದುಕೊಳ್ಳಬೇಕು ಅನ್ನುವುದು ನಿರ್ಣಯವಾಗಬೇಕು.

Mr. DEPUTY SPEAKER.—The House will adjourn now to meet again at 9-30 A.M. tomorrow.

---

*The House adjourned at Thirty Minutes past Eleven of the Clock to meet at Thirty Minutes past Nine of the Clock on Tuesday, the 2nd March 1965.*

---

KSA LIBRARY, B'lore
B004822
328.32402 548 LAD,1965
JJ34

WD 4465—GPB—500—24-4-65